Reg NO(PRGI NO): KNKAN/25/A0970 • ಸಂಪುಟ 1 • ಸಂಚಿಕೆ 32 email: tatvanishtadaily@gmail.com 9481559555 08384 452643 3₹ ಪುಟ 6 ಬುಧವಾರ | ಅಕ್ಟೋಬರ್ | 01 | 2025

# ತತ್ವನಿಷ್ಠ

ನಾಡಿನ ನಿಖರ ನುಡಿ

**ದಿನದಕಗ್ಗ**

ಆಶೆಗಳ ಕೆಣಕದಿರು; ಪಾಶಗಳ ಬಿಗಿಯದಿರು |
ಕ್ಲೇಶದ ಪರೀಕ್ಷೆಗಳಿಗೆನ್ನ ಕರೆಯದಿರು || ಬೇಸರದ
ಪಾತಕಸ್ಮೃತಿಯ ಚುಚ್ಚದಿರ್; ಎನ್ನು- | ತೀಶನನು
ಬೇಡುತಿರೊ - ಮಂಕುತಿಮ್ಮ ||

**ಶುಭಾಶಯ**

ನಮ್ಮ ಎಲ್ಲ ಓದುಗರು, ಜಾಹೀರಾತುದಾರರು, ಏಜೆಂಟರು, ಹಿತೈಷಿಗಳಿಗೆ ವಿಜಯದಶಮಿಯ ಶುಭಾಶಯಗಳು.

**ಬಿಡುವು**

ಹಬ್ಬದ ನಿಮಿತ್ತ ಅ. 1ರಂದು ಕಚೇರಿಗೆ ಬಿಡುವು ಇರುವುದರಿಂದ ಅ. 2ರ ಸಂಚಿಕೆ ಪ್ರಕಟವಾಗುವುದಿಲ್ಲ.

-ಸಂ

**ಅಂಗಡಿ ಮಾರುವುದಿದೆ**

ಶಿರಸಿಯ ದೇವಿಕೆರೆ ಸಮೀಪ ಉತ್ತಮವಾಗಿ ನಡೆಯುತ್ತಿರುವ, ದಿನಕ್ಕೆ 15 ಸಾವಿರಕ್ಕೂ ಹೆಚ್ಚು ವ್ಯಾಪಾರವಿರುವ, ವಿಶಾಲ ಸ್ಥಳಾವಕಾಶವಿರುವ ಸ್ಟೇಷನರಿ ಅಂಗಡಿ ಸ್ಟಾಕ್ ಮತ್ತು ಫರ್ನೀಚರ್ ಸಹಿತ ಮಾರುವುದಿದೆ.

ಸಂಪರ್ಕಿಸಿ 74830 18880

## ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯ ಅರವಿಂದ ಬೆಲ್ಲದ್ ಆರೋಪ

3

**ಮಿಂಚು** ನಾಗೇಂದ್ರ ಯಲ್ಲಾಪುರ



ಓ...ಬಿಡಿ ಸಾರ್... ಬಾಯಿ ತಪ್ಪಿ ಬಂದೋಯ್ತು, ನನ್ನದು ಬುರುಡೆ ಎಣಿಸೋ ಜಾತಿಯಂತ...!!

ಸುಂದರ, ಆಕರ್ಷಕ, ಸ್ಪುಟವುಳ್ಳ ಜಾಹೀರಾತಿಗಾಗಿ ಸಂಪರ್ಕಿಸಿ 9481559555


















# ನೂತನ ಶಾಲಾ ಕಟ್ಟಡ ಮಂಜೂರಿಗೆ ಒತ್ತಾಯಿಸಿ ಸಂಸದರಿಗೆ ಮನವಿ

**● ತತ್ವನಿಷ್ಠ, ಯಲ್ಲಾಪುರ:** ತಾಲೂಕಿನ ಕರಡೊಳ್ಳಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಕಟ್ಟಡ ಶಿಥಿಲಗೊಂಡಿದ್ದು, ಹೊಸ ಕಟ್ಟಡ ಮಂಜೂರಿಗಾಗಿ ಆಗ್ರಹಿಸಿ ಗ್ರಾಮಸ್ಥರು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

ಕಟ್ಟಡ ತೀರಾ ಹಳೆಯದಾಗಿದ್ದು, ಮೇಲ್ಛಾವಣಿ ಕುಸಿದು ಬೀಳುವ ಹಂತದಲ್ಲಿದೆ. ಗೋಡೆಗಳು ಅಲ್ಲಲ್ಲಿ ಬಿರುಕು ಬಿಟ್ಟು, ವಿದ್ಯಾರ್ಥಿಗಳು ಭಯದಲ್ಲೇ ಶಾಲೆಯ ಶೈಕ್ಷಣಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆ. 40 ಕ್ಕೂ ಹೆಚ್ಚು



ವಿದ್ಯಾರ್ಥಿಗಳು ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಗೋಡೆ, ಮೇಲ್ಛಾವಣಿ ಕುಸಿದು ಅಪಾಯ ಉಂಟಾಗುವ ಸಾಧ್ಯತೆಯಿದೆ.

ಅವಘಡ ಉಂಟಾಗುವ ಮೊದಲೇ ಹೊಸ ಕಟ್ಟಡ ನಿರ್ಮಿಸಿ, ಮಕ್ಕಳ ಸುರಕ್ಷತೆಗೆ ಕ್ರಮ ಆಗಬೇಕಾಗಿದೆ. ಈಗಾಗಲೇ ಡಿಡಿಪಿಐ ಅವರಿಗೂ ಮನವಿ ಸಲ್ಲಿಸಿದ್ದೇವೆ. ಆದರೆ ಅವರಿಂದ ಯಾವುದೇ ಸ್ಪಂದನೆ ದೊರೆತಿಲ್ಲ. ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿ, ಶಾಲೆಗೆ ಎರಡು ನೂತನ ಕೊಠಡಿಗಳನ್ನು ಮಂಜೂರಿ ಮಾಡಿಕೊಡಬೇಕೆಂದು ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಂಸದ ಕಾಗೇರಿ, ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ, ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಕರ್ನಾಟಕ ರಾಜ್ಯ ಧನಗರ ಗೌಳಿ ಯುವ ಸೇನೆಯ ಖಜಾಂಚಿ ಲಕ್ಷ್ಮಣ ಕೋಕರೆ, ಎಸ್.ಡಿ.ಎಂ.ಸಿ ಅಧ್ಯಕ್ಷ ಗಂಗಾರಾಮ ಪದ್ದು ಕೋಕರೆ, ಹುಣಶೆಟ್ಟಿಕೊಪ್ಪದ ಶ್ರೀ ಗ್ರಾಮದೇವಿ ವಿವಿಧೋದ್ದೇಶಗಳ ಪ್ರಾಥಮಿಕ ಸಹಕಾರಿ ಸಂಘದ ಅಧ್ಯಕ್ಷ ಮಹೇಶ ದೇಸಾಯಿ, ಸಾಮಾಜಿಕ ಕಾರ್ಯಕರ್ತರಾದ ಚಂದು ಮಡಕರ್, ಶ್ಯಾಮ ಸಿಂಧೆ, ಗ್ರಾಮಸ್ಥರಾದ ಧಾಕು ಜೋರೆ, ಘಾಟು ಸಿಂಧೆ, ವಿಷ್ಣು ಕೋಕರೆ, ಸಂತೋಷ್ ಕೋಕರೆ, ರಾಮಾನಾಥ್ ಸಿಂಧೆ ಇತರರಿದ್ದರು.

# ಆನ್‌ಲೈನ್‌ನಲ್ಲಿ ಸಮೀಕ್ಷೆಯಲ್ಲಿ ಪಾಲ್ಗೊಳ್ಳಿ

## ಸರ್ಕಾರಿ ಅಧಿಕಾರಿಗಳು, ಸಿಬ್ಬಂದಿಗೆ ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ ಸೂಚನೆ

**● ತತ್ವನಿಷ್ಠ, ಕಾರವಾರ:** ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ರಾಜ್ಯದ ಎಲ್ಲ ನಾಗರಿಕರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಕುರಿತು ನಿಖರವಾದ ಮಾಹಿತಿ ಸಂಗ್ರಹಿಸಲು ಈಗಾಗಲೇ ರಾಜ್ಯಾದ್ಯಂತ ಸಮೀಕ್ಷೆ ಕಾರ್ಯ ಆರಂಭಗೊAಡಿದ್ದು, ಈ ಸಮೀಕ್ಷೆಗಾಗಿ ಮನೆಗಳಿಗೆ ಗಣತಿದಾರರು ಬರುವವರೆಗೆ ಕಾಯದೇ ಜಿಲ್ಲೆಯ ಎಲ್ಲ ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿ ಸ್ವಯಂ ಘೋಷಣೆ ಮೂಲಕ ಆನ್‌ಲೈನ್‌ನಲ್ಲಿ ಸಮೀಕ್ಷೆಯಲ್ಲಿ ಭಾಗವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ ತಿಳಿಸಿದರು.

ಅವರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ವರ್ಚುವಲ್ ಮೂಲಕ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಈಗಾಗಲೇ ಗುರುತಿಸಲಾಗಿರುವ ಎಲ್ಲ ಮನೆಗಳಿಗೆ ಗಣತಿದಾರರು ಭೇಟಿ ನೀಡಿ, ಗಣತಿ ಕಾರ್ಯ



ನಡೆಸುತ್ತಿದ್ದು, ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿ ಗಣತಿದಾರರು ತಮ್ಮ ಮನೆ ಬಾಗಿಲಿಗೆ ಬರುವವರೆಗೆ ನಿರೀಕ್ಷಿಸದೇ https://kscbcselfdeclaration.karnataka.gov.in/ ನಲ್ಲಿ ತಮ್ಮ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು self declaration ಮೂಲಕ ಮಾಡಿಕೊಳ್ಳುವಂತೆ ತಿಳಿಸಿದ ಅಪರ ಜಿಲ್ಲಾಧಿಕಾರಿ, ಪ್ರಮುಖವಾಗಿ ಹೆಚ್ಚು ಸಿಬ್ಬಂದಿಗಳನ್ನು ಹೊಂದಿರುವ ಪೊಲೀಸ್, ಆರೋಗ್ಯ. ಶಿಕ್ಷಣ, ಜಿಲ್ಲಾ ಪಂಚಾಯತ್ ಮುಂತಾದ ಇಲಾಖೆಗಳ ಅಧಿಕಾರಿಗಳು ತಮ್ಮ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರ ಗುತ್ತಿಗೆ ಸಿಬ್ಬಂದಿಗಳೂ ಸೇರಿದಂತೆ ಎಲ್ಲ ಸಿಬ್ಬಂದಿಗೆ ಈ ಬಗ್ಗೆ ಮಾಹಿತಿ ನೀಡುವಂತೆ ತಿಳಿಸಿದರು.

ಆನ್‌ಲೈನ್ ಲಿಂಕ್ ಬಳಸಿ ಸಮೀಕ್ಷೆಯಲ್ಲಿ ಭಾಗವಹಿಸುವ ಕುರಿತ ಪ್ರಕ್ರಿಯೆಗಳ ಪ್ರಾತ್ಯಕ್ಷಿಕೆಯ ವಿವರಗಳನ್ನು ಹಾಗೂ ಲಿಂಕ್ ನ್ನು ಎಲ್ಲಅಧಿಕಾರಿಗಳಿಗೆ ನೀಡಿದ ಅವರು, ಈ ವಿಧಾನವು ಅತ್ಯಂತ ಸುಲಭವಾಗಿದ್ದು , ಪಡಿತರ ಚೀಟಿ, ಮತದಾರರ ಚೀಟಿ ಮತ್ತು ಆಧಾರ್ ದಾಖಲೆಗಳನ್ನು ಸಿದ್ದವಾಗಿಟ್ಟುಕೊಂಡು ಗರಿಷ್ಠ 15 ನಿಮಿಷಗಳ ಒಳಗೆ ತಮ್ಮ ಕುಟುಂಬದ ಸಮೀಕ್ಷೆಯನ್ನು ಸ್ವಯಂ ಆಗಿ ಮಾಡಿಕೊಳ್ಳಬಹುದಾಗಿದೆ. ಮುಂದಿನ 2 ದಿನಗಳು ರಜೆ ಇದ್ದು, ಅಧಿಕಾರಿ/ ಸಿಬ್ಬಂದಿಗಳು ಬಿಡುವಿನ ಅವಧಿಯಲ್ಲಿ ತಮ್ಮ ಕುಟುಂಬಗಳ ಸಮೀಕ್ಷೆಯನ್ನು ಪೂರ್ಣಗೊಳಿಸಿ, ಅಕ್ಟೋಬರ್ 3 ರಂದು ಎಲ್ಲಾ ಇಲಾಖೆಗಳು ಇದರ ಪ್ರಗತಿಯ ಕುರಿತಂತೆ ವರದಿಯನ್ನು ಸಲ್ಲಿಸಬೇಕು ಎಂದರು.

ಸಾರ್ವಜನಿಕರೂ ಕೂಡಾ ಆನ್‌ಲೈನ್ ಲಿಂಕ್ ಬಳಸಿ ಈ ಸಮೀಕ್ಷೆಯಲ್ಲಿ ಭಾಗವಹಿಸಬಹುದಾಗಿದ್ದು, ಜಿಲ್ಲೆಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಕಾರ್ಯದಲ್ಲಿ ಶೇ.100 ರಷ್ಟು ಪ್ರಗತಿ ಸಾಧಿಸಲು ಪ್ರತಿಯೊಬ್ಬರೂ ಸಹಕರಿಸಲು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನೀರಜ್, ಜಿಲ್ಲಾ ವಾರ್ತಾಧಿಕಾರಿ ಬಿ.ಶಿವಕುಮಾರ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಜಹೀರ್ ಅಬ್ಬಾಸ್, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಶಿವಕ್ಕ ಮಾದರ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಉಮೇಶ್ ಹಾಗೂ ವರ್ಚುವಲ್ ಮೂಲಕ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ಹಾಜರಿದ್ದರು.

## ಜನಮೆಚ್ಚುಗೆ ಪಡೆದ ಶ್ರೀಚಕ್ರ ದರ್ಶನ



**● ತತ್ವನಿಷ್ಠ, ಯಲ್ಲಾಪುರ:** ತಾಲೂಕಿನ ಹುಲೆಕೋಣೆಯಲ್ಲಿ ಶಾರದಾ ಉತ್ಸವದ ಪ್ರಯುಕ್ತ ವಿಶ್ವವಂದ್ಯಂ ಮಹಿಳಾ ಕಲಾ ಬಳಗದ ಕಲಾವಿದರಿಂದ ಪ್ರಸ್ತುತಗೊಂಡ ಶ್ರೀಚಕ್ರ ದರ್ಶನ ತಾಳಮದ್ದಲೆ ಪ್ರೇಕ್ಷಕರ ಮೆಚ್ಚುಗೆ ಗಳಿಸಿತು. ಹಿಮ್ಮೇಳದಲ್ಲಿ ಭಾಗವತರಾಗಿ ಮಹಾಬಲೇಶ್ವರ ಭಟ್ಟ ಬೆಳಶೇರು, ಮದ್ದಲೆವಾದಕರಾಗಿ ನಾಗಪ್ಪ ಕೋಮಾರ, ಚಂಡೆವಾದಕರಾಗಿ ಪ್ರಶಾಂತ ಹೆಗಡೆ ಕೈಗಡಿ, ಸಂಜಯ ಕೋಮಾರ ಭಾಗವಹಿಸಿದ್ದರು. ಭೀಷ್ಮನಾಗಿ ಚಂದ್ರಕಲಾ ಭಟ್ಟ ಇಡಗುಂದಿ, ಕೌರವನಾಗಿ ಅರ್ಚನಾ ಹೆಗಡೆ ಜೂಜಿನಬೈಲ, ಕೃಷ್ಣನಾಗಿ ಶ್ವೇತಾ ವೈದ್ಯ, ಭಾರತಿ ಭಟ್ಟ, ಅರ್ಜುನನಾಗಿ ದೀಪಿಕಾ ಭಟ್ಟ ಕೋಲಿಬೇಣ, ಅಭಿಮನ್ಯು ಮತ್ತು ಕರ್ಣನಾಗಿ ಪ್ರಣತಿ ಹೆಗಡೆ ಜೂಜಿನಬೈಲ, ದ್ರೋಣನಾಗಿ ನಯನಾ ಭಟ್ಟ ಪಾತ್ರ ನಿರ್ವಹಿಸಿದರು. ಶಾರದಾ ಉತ್ಸವ ಸಮಿತಿಯ ಪ್ರಮುಖರು ಕಲಾವಿದರನ್ನು ಗೌರವಿಸಿದರು.

## ಆಕಸ್ಮಿಕ ಬೆಂಕಿ; ಹೊತ್ತಿ ಉರಿದ ಕಾರು



**● ತತ್ವನಿಷ್ಠ, ಯಲ್ಲಾಪುರ:** ಕಾರೊಂದು ಹೆದ್ದಾರಿ ಪಕ್ಕದ ಕಟ್ಟೆಗೆ ಡಿಕ್ಕಿ ಹೊಡೆದ ಪರಿಣಾಮ ಆಕಸ್ಮಿಕ ಬೆಂಕಿ ಹೊತ್ತಿಕೊಂಡು ಭಸ್ಮವಾಗಿದೆ. ಘಟನೆ ರಾಷ್ಟ್ರೀಯ ಹೆದ್ದಾರಿಯಲ್ಲಿ ತಾಲೂಕಿನ ಶೇಡಿಕೆರೆ ಕ್ರಾಸ್ ಬಳಿ ನಡೆದಿದೆ. ಯಲ್ಲಾಪುರದಿಂದ ಕುಮಟಾ ಕಡೆಗೆ ಹೊರಟಿದ್ದ ಕಾರು, ಚಾಲಕನ ನಿಯಂತ್ರಣ ತಪ್ಪಿ ಶೇಡಿಕೆರೆ ಕ್ರಾಸ್ ಬಳಿ ಹೆದ್ದಾರಿ ಪಕ್ಕದ ಕಟ್ಟೆಗೆ ಡಿಕ್ಕಿ ಹೊಡೆದಿದೆ. ಈ ವೇಳೆ ಶಾರ್ಟ್ ಆಗಿ ಬೆಂಕಿ ಹೊತ್ತಿಕೊಂಡಿದೆ. ಸ್ಥಳಕ್ಕೆ ಪೊಲೀಸರು, ಅಗ್ನಿಶಾಮಕ ದಳದವರು ಬಂದು ಬೆಂಕಿ ಆರಿಸಿದ್ದು, ಅಷ್ಟರಲ್ಲಾಗಲೇ ಕಾರು ಸಂಪೂರ್ಣ ಸುಟ್ಟು ಹೋಗಿತ್ತು. ಕಾರಿನಲ್ಲಿದ್ದ ಇಬ್ಬರೂ ಅಪಾಯದಿಂದ ಪಾರಾಗಿದ್ದಾರೆ. ಘಟನೆಯಿಂದ ಕೆಲಕಾಲ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಯಿತು. ಪೊಲೀಸರು ಸಂಚಾರ ವ್ಯವಸ್ಥೆ ಸುಗಮಗೊಳಿಸಿದರು.

# ಬನವಾಸಿಯ ವಿವಿಧ ಇಲಾಖೆ ಅಧಿಕಾರಿಗಳ ಸನ್ಮಾನ

**● ತತ್ವನಿಷ್ಠ, ಬನವಾಸಿ:** ಇಲ್ಲಿಯ ಮಧುಕೇಶ್ವರ ದೇವಸ್ಥಾನದಲ್ಲಿ ನಡೆಯುತ್ತಿರುವ ಶರನ್ನವರಾತ್ರಿಯ ಸಾಂಸ್ಕೃತಿಕ ಕಾರ್ಯಕ್ರಮವು ಸಂಭ್ರಮದಿಂದ ಜರುಗಿತು.

ಕಾರ್ಯಕ್ರಮದಲ್ಲಿ ಪಟ್ಟಣದಲ್ಲಿ ವಿವಿಧ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳನ್ನು ಸನ್ಮಾನಿಸಲಾಯಿತು.

ಪಿಡಬ್ಲ್ಯುಡಿ ಸಹಾಯಕ ಅಭಿಯಂತರ ಭಾನುಪ್ರಕಾಶ್, ಜಿಲ್ಲಾ ಪಂಚಾಯತ ಸಹಾಯಕ ಅಭಿಯಂತರ ರಂಗಪ್ಪ, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಜಯಶ್ರೀ ಹೆಗಡೆ, ವಲಯ ಅರಣ್ಯಾಧಿಕಾರಿ ಭವ್ಯಾ, ಪಿಎಸ್‌ಐ ರವೀಂದ್ರ ಬಿರಾದಾರ, ಉಪ ತಹಶೀಲ್ದಾರ್ ಚಿದಾನಂದ, ಕಂದಾಯ



ನಿರೀಕ್ಷಕ ಬಸವರಾಜ್ ಮಲ್ಲಮ್ಮನವರ್, ಗ್ರಾಮಲೆಕ್ಕಾಧಿಕಾರಿ ಬಸವರಾಜ್ ತೋಟಗಟ್ಟಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹನುಮಂತ ಛಲವಾದಿ, ಹೆಸ್ಕಾಂ ಶಾಖಾಧಿಕಾರಿ ಯಾದವ್ ಬೊರಕರ್ ಅವರನ್ನು ದೇವಸ್ಥಾನದ ಆಡಳಿತ ಅಧಿಕಾರಿ ಗ್ರೇಡ್ 2 ತಹಶೀಲ್ದಾರ್ ರಮೇಶ ಹೆಗಡೆ ಸನ್ಮಾನಿಸಿದರು.

ಸನ್ಮಾನ ಸ್ವೀಕರಿಸಿದ ಪಿಡಬ್ಲ್ಯುಡಿ. ಸಹಾಯಕ ಅಭಿಯಂತರ ಭಾನುಪ್ರಕಾಶ್, ಕ್ರೈಮ್ ಪಿಎಸ್‌ಐ ರವೀಂದ್ರ ಬಿರಾದಾರ ಕಾರ್ಯಕ್ರಮದ ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ದೇವಸ್ಥಾನದ ಆಡಳಿತ ಅಧಿಕಾರಿ ಗ್ರೇಡ್ 2 ತಹಶೀಲ್ದಾರ್ ರಮೇಶ ಹೆಗಡೆ, ಪ್ರಕಾಶ ಬಂಗ್ಲೆ, ಶಂಕರ ಉಪ್ಪಾರ, ಸಾಂಸ್ಕೃತಿಕ ಸಮಿತಿಯ ಸದಸ್ಯರಾದ ಸೀಮಾವತಿ ಕೆರೊಡಿ, ಪ್ರಶಾಂತ ಶೇಟ್, ಸತೀಶ್ ಕೆರೊಡಿ, ಸಾಯಿರಾಂ ಕಾನಳ್ಳಿ, ಮನೋಜ ರೇವಣಕರ, ಸಂಗೀತ ಕೊಳೇಕರ್, ಸಂಧ್ಯಾ ಖರೆ, ಆರತಿ ಅಡಿಗುಂಡಿ, ಗೀತಾ ಯಜಮಾನಿ, ಅಕ್ಷಯ್ ಶೇಟ್ ಇದ್ದರು.

ಶಿರಸಿಯ ಶ್ರೀ ರಾಮಭಜನಾ ಮಂಡಳಿಯ ಕುಣಿತ ಭಜನೆ ಹಾಗೂ ದುರ್ಗೇಶ್ ಹಾಗೂ ತಂಡದವರಿಂದ ಭಕ್ತಿ ಗೀತೆ ಗಾಯನ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮವನ್ನು ಶಿಕ್ಷಕ ಗೌರೀಶ ಅಡಿಗುಂಡಿ ನಿರೂಪಿಸಿದರು. ಪತ್ರಕರ್ತ

# ಕಾರ್ಮಿಕರೂ ದೇಶದ ಬೆನ್ನೆಲುಬು: ದಿನಕರ ಶೆಟ್ಟಿ

**● ತತ್ವನಿಷ್ಠ, ಕುಮಟಾ:** ಕಾರ್ಮಿಕರು ಇಂದಿನ ಕಾಲದಲ್ಲಿ ದೇಶದ ಬೆನ್ನೆಲುಬಾಗಿ ಕೆಲಸ ಮಾಡುತ್ತಿದ್ದಾರೆ. ಜೀವದ ಹಂಗು ತೊರೆದು ಅವರು ಮಾಡುತ್ತಿರುವ ಕಾರ್ಯ ನಿಜವಾಗಿಯೂ ಶ್ಲಾಘನೀಯ ಎಂದು ಶಾಸಕ ದಿನಕರ ಶೆಟ್ಟಿ ಹೇಳಿದರು.

ಅವರು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ನಡೆದ ಸಂಚಾರಿ ಆರೋಗ್ಯ ಘಟಕ ಉದ್ಘಾಟನೆ ಹಾಗೂ ಕಾರ್ಮಿಕರಿಗೆ ಸೇಫ್ಟಿ ಕಿಟ್ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಾರ್ಮಿಕರಿಗೆ ಅವಶ್ಯವಾದ ಕಿಟ್ ಗಳನ್ನು ಇಷ್ಟು ದೊಡ್ಡ ಪ್ರಮಾಣದಲ್ಲಿ ನೀಡಿರುವುದು ಇದೇ ಮೊದಲು. ಈ ಹಿನ್ನೆಲೆಯಲ್ಲಿ ಕಾರ್ಮಿಕ ಸಚಿವರಾದ ಸಂತೋಷ್ ಲಾಡ್ ಅವರು ಅಭಿನಂದನಾರ್ಹರು. ಕಾರ್ಮಿಕರಿಗೆ ಬೇಕಾದ ಎಲ್ಲಾ ಸೌಲತ್ತುಗಳನ್ನು ಮಾಡಿಸಿಕೊಡಲು ನಾನೂ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಶಿಕ್ಷಣ, ಆರೋಗ್ಯ, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಶಾಸಕನಾಗಿ ಕಾರ್ಯ ಮಾಡಿದ್ದೇನೆ ಎಂದರು.



ಶಿವರಾಮ ಹೆಬ್ಬಾರರು ಕಾರ್ಮಿಕ ಇಲಾಖೆ ಜೀವಂತವಾಗಿದೆ ಎಂದು ತೋರಿಸಿಕೊಟ್ಟವರು. ಮೊದಲು ಕಾರ್ಮಿಕ ಇಲಾಖೆಯೇ ಬೇಡ ಎನ್ನುತ್ತಿದ್ದ ಶಾಸಕರು ಕಾರ್ಮಿಕರಿಗೆ ಯಾವ ರೀತಿಯ ಸಹಕಾರ ನೀಡಬಹುದು ಎಂಬುದನ್ನು ತೋರಿಸಿದ್ದರು. ಬಿಜೆಪಿ ಅಧಿಕಾರ ಅವಧಿಯಲ್ಲಿ ಕಾರ್ಮಿಕ ಇಲಾಖೆಯ ಕಟ್ಟಡವನ್ನು ನಿರ್ಮಾಣ ಮಾಡಿಕೊಟ್ಟಿದ್ದೇವೆ. ಕಾರ್ಮಿಕರಿಗೆ ಬೇಕಾದ ಎಲ್ಲಾ ಸೌಲತ್ತುಗಳನ್ನು ಮನೆ ಮನೆಗೆ ತಲುಪಿಸುವ ಕಾರ್ಯವನ್ನು ಅಧಿಕಾರಿಗಳು ಮಾಡಬೇಕು ಎಂದು ಶಾಸಕರು ತಿಳಸಿದರು.

ತಾಲೂಕಾ ಪಂಚಾಯತ ಕಾರ್ಯನಿರ್ವಹಣಾ ಅಧಿಕಾರಿ ರಾಜೇಂದ್ರ ಭಟ್ಟ, ಪುರಸಭಾ ಅಧ್ಯಕ್ಷೆ ಸುಮತಿ ಭಟ್ಟ, ಸ್ಥಾಯಿ ಸಮಿತಿ ಅಧ್ಯಕ್ಷ ಸೂರ್ಯಕಾಂತ ಗೌಡ, ಪುರಸಭಾ ಸದಸ್ಯೆ ಮೋಹಿನಿ ಗೌಡ, ಕಾರ್ಮಿಕ ನಿರೀಕ್ಷಕ ಡಿ.ಎಂ ವೆಂಕಟೇಶ ಬಾಬು ಹಾಗೂ ಇಲಾಖೆಯ ಸಿಬ್ಬಂದಿಗಳು ಹಾಜರಿದ್ದರು.

> **ಕಾರ್ಮಿಕರಿಗೆ ಡ್ರಿಲ್ಲಿಂಗ್ ಮಶೀನ್ ಹಾಗೂ ಇತರ ಅವರಿಗೆ ಉಪಯೋಗವಾಗುವಂತಹ ವಸ್ತುಗಳನ್ನು ನೀಡುವ ಮೂಲಕ ಇನ್ನೂ ಹೆಚ್ಚಿನ ರೀತಿಯಲ್ಲಿ ನೆರವಾಗಿ. ಕಾರ್ಮಿಕರ ರಕ್ಷಣೆ ಎಷ್ಟು ಮುಖ್ಯವೋ ಅವರಿಗೆ ಅಗತ್ಯವಾದ ನೆರವನ್ನು ನೀಡುವುದೂ ಅಷ್ಟೇ ಮುಖ್ಯ.**
>
> ● ದಿನಕರ ಶೆಟ್ಟಿ, ಶಾಸಕರು

# ಭೈರುಂಬೆಯಲ್ಲಿ ಯಕ್ಷಗಾನ ಪ್ರದರ್ಶನ

**● ತತ್ವನಿಷ್ಠ, ಶಿರಸಿ:** ಭೈರುಂಬೆಯಲ್ಲಿ ಅ.3 ಮತ್ತು ಅ.4ರಂದು ಯಕ್ಷಗಾನ ಪ್ರದರ್ಶನಗಳು ಜರುಗಲಿವೆ. ಇಲ್ಲಿನ ಶಾರದಾಂಬಾ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಗೆಳೆಯರ ಬಳಗ ಭೈರುಂಬೆ ಹಾಗೂ ಘಾಟಕ ಯಕ್ಷ ಸಮಿತಿ ಟ್ರಸ್ಟ್, ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಪ್ರದರ್ಶನ ನಡೆಯಲಿದೆ.

ಅ.3ರಂದು ಸಂಜೆ 5 ಗಂಟೆಗೆ ಹುಳಗೋಳ ಪ್ರಾಥಮಿಕ ಕೃಷಿ ಸಹಕಾರಿ ಸಂಘ ಸಭಾಭವನದಲ್ಲಿ "ಶಲ್ಯಪರ್ವ ಗದಾಪರ್ವ" ಯಕ್ಷಗಾನವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಭಾಗವತರಾಗಿ ಶ್ರೀಪಾದ ಬಾಳೆಗದ್ದೆ, ಅನಂತ ದಂತಳಿಕೆ ಭಾಗವಹಿಸಲಿದ್ದು, ಮದ್ದಲೆಯಲ್ಲಿ ಎ.ಪಿ. ಫಾಟಕ (ಕಾರ್ಕಳ), ಎನ್.ಜಿ. ಹೆಗಡೆ, ಚಂಡೆಯಲ್ಲಿ ಪ್ರಸನ್ನ ಹೆಗ್ಗಾರ, ಗಜಾನನ ಸಾಂತೂರು, ವೇಷಭೂಷಣ ಉದಯ ಅಡುಕಳ, ಧ್ವನಿ ಮತ್ತು ಬೆಳಕು: ಕಾರ್ತಿಕ್ ಸೌಂಡ್ಸ್, ಶಿರಸಿ ಕಾರ್ಯನಿರ್ವಹಿಸಲಿದ್ದಾರೆ. ಮುಮ್ಮೇಳದಲ್ಲಿ ಕೆ.ಜಿ. ಮಂಜುನಾಥ, ಸಂಜಯ ಬೆಳೆಯೂರು, ಆಂಸಳ್ಳಿ ಈಶ್ವರ ಭಟ್, ಕುಳಿಮನೆ ನಾಗೇಶ, ಹಿಲ್ಲೂರು ಮಂಜುನಾಥ ಭಟ್, ಪ್ರವೀಣ ಹೆಗಡೆ, ತಟ್ಟೀಸರ, ಸಂತೋಷ ಹುಳ್ಸೆಮಕ್ಕಿ, ಲಕ್ಷ್ಮೀಶ ಕಡ್ನೀರು, ಕುಮಾರ ತನ್ಮಯ ಹೆಗಡೆ, ಕುಮಾರಿ ಅವನಿ ಹೆಗಡೆ, ಅಜಿತ್ ಕಾರಂತ, ನಾಗರಾಜ ಉಮ್ಮಚಗಿ ಪಾಲ್ಗೊಳ್ಳಲಿದ್ದಾರೆ. ಹಾಸ್ಯವೇಷದಲ್ಲಿ ಶ್ರೀಧರ ಹೆಗಡೆ (ಚಪ್ಪರಮನೆ) ಕಾಣಿಸಿಕೊಳ್ಳಲಿದ್ದಾರೆ.

ಅ.4ರಂದು ಸಂಜೆ 5 ಗಂಟೆಗೆ "ರೇಣುಕಾ ಮಹಾತ್ಮೆ ಕಾರ್ತವೀರ್ಯ ವಧೆ" ಯಕ್ಷಗಾನ ನಡೆಯಲಿದೆ. ಇದರ ಭಾಗವತರಾಗಿ ಅನಂತ ದಂತಳಿಗೆ, ರಾಮಕೃಷ್ಣ ಹೆಗಡೆ, ಮದ್ದಲೆಯಲ್ಲಿ ಎ.ಪಿ. ಫಾಟಕ, ಎನ್.ಜಿ. ಹೆಗಡೆ, ಚಂಡೆಯಲ್ಲಿ ಗಣೇಶ ಗಾಂವ್ಕರ, ಗಜಾನನ ಸಾಂತೂರು, ವೇಷಭೂಷಣ ಉದಯ ಅಡುಕಳ, ಧ್ವನಿ ಮತ್ತು ಬೆಳಕು ಕಾರ್ತಿಕ್ ಸೌಂಡ್ಸ್, ಶಿರಸಿ ನಿರ್ವಹಿಸಲಿದ್ದಾರೆ. ಮುಮ್ಮೇಳದಲ್ಲಿ ಸುಬ್ರಹ್ಮಣ್ಯ ಹೆಗಡೆ (ಚಿಟ್ಟಾಣಿ), ಸಂಜಯ ಬೆಳೆಯೂರು, ಸದಾಶಿವ ಭಟ್ (ಮಲವಳ್ಳಿ), ಸುಮಾ ಹಡಗಿಹೊಳೆ, ಕುಳಿಮನೆ ನಾಗೇಶ, ಈಶ್ವರ ಭಟ್ (ಆಂಸಳ್ಳಿ), ವಿಶ್ವನಾಥ ಹೆನ್ನಾಬೈಲು, ಸಂತೋಷ ಹುಳ್ಸೆಮಕ್ಕಿ, ದೀಪಕ ಕುಂಕಿ, ಲಕ್ಷ್ಮೀಶ ಕಡ್ನೀರು, ಕುಮಾರ ತನ್ಮಯ ಹೆಗಡೆ, ಕುಮಾರಿ ಅವನಿ ಭಟ್, ಕುಮಾರಿ ಭಾವನ ಹೆಗಡೆ ಭಾಗವಹಿಸಲಿದ್ದಾರೆ. ಹಾಸ್ಯದಲ್ಲಿ ಶ್ರೀಧರ ಹೆಗಡೆ (ಚಪ್ಪರಮನೆ) ಕಾಣಿಸಿಕೊಳ್ಳಲಿದ್ದಾರೆ.

ಹುಳಗೋಳ ಪ್ರಾಥಮಿಕ ಕೃಷಿ ಸಹಕಾರಿ ಸಂಘ, ಭೈರುಂಬೆ ಸಹಕಾರ ನೀಡಿದೆ. ಯಕ್ಷಗಾನಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿಕಾರ್ಯಕ್ರಮಯಶಸ್ವಿಗೊಳಿಸುವಂತೆ ಸಂಘಟಕರ ಪರವಾಗಿ ಧಾರವಾಡ ಹಾಲು ಒಕ್ಕೂಟದ ಪ್ರಭಾರಿ ಅಧ್ಯಕ್ಷ ಸುರೇಶ್ಚಂದ್ರ ಹೆಗಡೆ, ಕೆಶಿನ್ಮನೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ದಸರಾ ಉತ್ಸವ: ಜಾನಪದ ಸಂಗೀತ ಕಾರ್ಯಕ್ರಮ**

# ಮೊಬೈಲ್ ಬಂದು ಜನರಿಂದ ಜಾನಪದ ಸಂಸ್ಕೃತಿ ದೂರಾಗುತ್ತಿದೆ: ಭಂಡಾರಿ

**● ತತ್ವನಿಷ್ಠ, ಸಿದ್ದಾಪುರ:** ಯುವಕರು, ಮಕ್ಕಳಾದಿಯಾಗಿ ಇಂದಿನ ಜನತೆ ಮೊಬೈಲ್ ಗಳಿಂದ ಜಾನಪದ ಸಂಸ್ಕೃತಿಯನ್ನು ಮರೆಯುತ್ತಿದ್ದಾರೆ ಎಂದು ಮಾರಿಕಾಂಬಾ ದೇವಸ್ಥಾನ ಕಮಿಟಿ ಅಧ್ಯಕ್ಷ ಗಂಗಾಧರ ಎಸ್ ಭಂಡಾರಿ ಹೇಳಿದರು.

ತಾಲೂಕಿನ ಶಿರಳಗಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರವಾರ, ಶ್ರೀ ಮಾರಿಕಾಂಬ ದೇವಸ್ಥಾನ ಕಮಿಟಿ ಶಿರಳಗಿ ಹಾಗೂ ಶ್ರೀ ಈಶ್ವರ ಕಲಾ ಸಂಘ ಕಡಕೇರಿ ಹಾಗೂ ಊರನಾಗರಿಕರ ಸಂಯುಕ್ತ ಆಶ್ರಯದಲ್ಲಿ ದಸರಾ ಉತ್ಸವದ ಅಂಗವಾಗಿ ನಡೆದ ಜಾನಪದ ಸಂಗೀತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ನಮ್ಮ ಸಂಸ್ಕೃತಿಯ ಉಳಿವಿಗೆ ಜಾನಪದ ಕಾರ್ಯಕ್ರಮಗಳು ಎಲ್ಲಾ ಹಳ್ಳಿಗಳಲ್ಲಿ ನಡೆಯಬೇಕು. ಈಶ್ವರ ಯುವಕ ಸಂಘದ ಸದಸ್ಯರು ಜಾನಪದ ಕಲೆಯನ್ನು ಉಳಿಸಿಕೊಂಡು ಬಂದಿದ್ದಲ್ಲದೆ, ಇತರರಿಗೂ ಕಲಿಸುವ ಕಾರ್ಯ ಮಾಡುತ್ತಿದ್ದಾರೆ ಎಂದರು.

ಗ್ರಾಮ ಪಂಚಾಯತ ಸದಸ್ಯ ಧನಂಜಯ ವಿ ನಾಯ್ಕ, ಜಾನಪದ ನಮ್ಮ ಸಂಸ್ಕೃತಿಯ ಉಳುವಿನ ಅಗತ್ಯತೆ ಇದೆ. ಇಂತಹ ಜಾನಪದ ಕಾರ್ಯಕ್ರಮಗಳು ನಡೆದಾಗ ಜಾನಪದ ಜಾಗೃತಿಯ ಜತೆಗೆ ಸಂಸ್ಕೃತಿಯು ಉಳಿಯುತ್ತದೆ ಎಂದರು.

ಗ್ರಾಪಂ ಉಪಾಧ್ಯಕ್ಷೆ ಶಶಿಕಲಾ ಚೆನ್ನಯ್ಯ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಈಶ್ವರ ಕಲಾ ಸಂಘ ಕಡಕೇರಿ ಸದ್ಯರು ಗೀ ಗೀ ಪದ, ಜಾನಪದ ಗೀತೆಗಳು, ಪರಿಸರ ಜಾಗೃತಿ ಗೀತೆಗಳನ್ನು ಹಾಡಿದರು.

ಗ್ರಾಮ ಪಂಚಾಯತ ಮಾಜಿ ಅಧ್ಯಕ್ಷೆ, ಹಾಲಿ ಸದಸ್ಯೆ ಲತಾ ರಮೇಶ್ ನಾಯ್ಕ, ಈಶ್ವರ ಕಲಾ ಸಂಘದ ಅಧ್ಯಕ್ಷ ಗಂಗಾಧರ ಮಡಿವಾಳ, ಪತ್ರಕರ್ತ ಸುರೇಶ ಮಡಿವಾಳ, ಮಾರಿಕಾಂಬಾ ದೇವಸ್ಥಾನ ಕಮಿಟಿಯ ಕಾರ್ಯದರ್ಶಿ ಲೋಹಿತ್ ನಾಯ್ಕ, ಖಜಾಂಚಿ ಲೋಹಿತ್ ಗೌಡರ್, ಸಮಿತಿಯ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು. ಮಾರಿಕಾಂಬಾ ದೇವಸ್ಥಾನ ಕಮಿಟಿಯ ಅಣ್ಣಪ್ಪ ನಾಯ್ಕ ಶಿರಳಗಿ ಸ್ವಾಗತಿಸಿ, ನಿರೂಪಿಸಿದರು.

## ಪಂಚಾಂಗ

ಸಂವತ್ಸರ: ವಿಶ್ವಾವಸು. ಮಾಸ: ಆಶ್ವೀಜ.
ಪಕ್ಷ: ಶುಕ್ಲಪಕ್ಷ. ತಿಥಿ: ನವಮಿ. ನಕ್ಷತ್ರ: ಪೂರ್ವ ಆಷಾಢ
ಸೂರ್ಯೋದಯ: ಬೆಳಗ್ಗೆ-06:14. ಸೂರ್ಯಾಸ್ತ: ಸಂಜೆ-06:07.
ರಾಹು ಕಾಲ: ಬೆಳಗ್ಗೆ12:10 ರಿಂದ ಮಧ್ಯಾಹ್ನ-01:40 ರ ವರೆಗೆ
ಗುಳಿಕ ಕಾಲ: ಬೆಳಗ್ಗೆ: 10:41ರಿಂದ ಮಧ್ಯಾಹ್ನ: 12:10 ವರೆಗೆ



**ಶ್ರೀ ವಿಠ್ಠಲ ಭಟ್ಟ ಕೆಕ್ಕಾರು**
ಖ್ಯಾತ ಜ್ಯೋತಿಷಿಗಳು, ಆಧ್ಯಾತ್ಮಿಕ ಚಿಂತಕರು
9113295125

- ಮೇಷ: ಸನ್ನಿವೇಶಗಳಲ್ಲಿ ತಾಳ್ಮೆ ಮುಖ್ಯ; ಶಾಂತಿಯುತ ನಿರ್ಧಾರ ತೆಗೆದುಕೊಳ್ಳಿ.
- ವೃಷಭ: ಹಣಕಾಸಿನಲ್ಲಿ ಲಾಭ ಸಾಧ್ಯ; ಖರ್ಚಿನಲ್ಲಿ ನಿಯಂತ್ರಣ ಇರಲಿ.
- ಮಿಥುನ: ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ; ಹೊಸ ಪರಿಚಯ.
- ಕಟಕ: ಕುಟುಂಬ ಒಗ್ಗಟ್ಟಿಗೆ ಬಲ; ಸಹಕಾರದ ಮನೋಭಾವ ಬೆಳೆಸಿರಿ.
- ಸಿಂಹ: ಪ್ರತಿಭೆಗೆ ಅವಕಾಶ; ಹೊಸ ಚಟುವಟಿಕೆ ಪ್ರಾರಂಭಿಸಿ.
- ಕನ್ಯಾ: ಶ್ರಮ ಫಲ ನೀಡುತ್ತದೆ; ಸಣ್ಣ ತಪ್ಪು ಸರಿಪಡಿಸಿಕೊಳ್ಳಿ.
- ತುಲಾ: ಸಂಗಾತಿಯೊಂದಿಗೆ ಸಮನ್ವಯ ಅಗತ್ಯ; ಮಾತುಕತೆಗೆ ಪ್ರಾಮುಖ್ಯತೆ.
- ವೃಶ್ಚಿಕ: ಮನಸ್ಸಿನ ಶಕ್ತಿ ಹೆಚ್ಚಾಗುತ್ತದೆ; ಧ್ಯಾನ ಉಪಯುಕ್ತ.
- ಧನು: ಹೊಸ ಯೋಜನೆಗಳಿಗೆ ಉತ್ತಮ ಸಮಯ; ಯಶಸ್ಸು ಸಾಧ್ಯ.
- ಮಕರ: ಸಂಕೀರ್ಣ ಕೆಲಸಗಳಲ್ಲಿ ಮುನ್ನಡೆ; ನಿಪುಣತೆ ತೋರಿಸಿ.
- ಕುಂಭ: ಸೃಜನಶೀಲ ಚಟುವಟಿಕೆಗಳಲ್ಲಿ ಆಸಕ್ತಿ ಹೆಚ್ಚುತ್ತದೆ.
- ಮೀನ: ಸ್ವಅವಲೋಕನಕ್ಕೆ ಸಮಯ ಕೊಡಿ; ಶಾಂತಿ ಸಿಗುತ್ತದೆ.

## ಅಡಿಕೆ ಧಾರಣೆ

### ಶಿರಸಿ

| | ಕನಿಷ್ಠ | ಗರಿಷ್ಠ |
|---|---|---|
| ಆಪಿ | -------- | ------ |
| ರಾಶಿ | 47561 | 54899 |
| ಬೆಟ್ಟೆ | 36699 | 47602 |
| ಕೆಂಪು ಗೋಟು | 24199 | 33099 |
| ಬಿಳಿ ಗೋಟು | 26899 | 37899 |
| ಹಳೆ ಚಾಲಿ | ------ | ------ |
| ಹೊಸ ಚಾಲಿ | 41699 | 45500 |
| ಬಿಳಿ ಕಾಳು ಮೆಣಸು | 75999 | 76699 |
| ಕಾಳು ಮೆಣಸು | 62299 | 66099 |

### ಸಿದ್ದಾಪುರ

| | ಕನಿಷ್ಠ | ಗರಿಷ್ಠ |
|---|---|---|
| ಆಪಿ | ------ | -------- |
| ರಾಶಿ | 46119 | 55499 |
| ಬೆಟ್ಟೆ | 28619 | 42689 |
| ಕೆಂಪು ಗೋಟು | 28600 | 31989 |
| ಬಿಳಿ ಗೋಟು | 25000 | 33089 |
| ಹಳೆ ಚಾಲಿ | ------ | ------- |
| ಹೊಸ ಚಾಲಿ | 39099 | 44969 |
| ಕೋಕಾ | 20149 | 28799 |
| ಕಾಳು ಮೆಣಸು | 58089 | 67089 |

## ಟಿಎಸ್ಎಸ್ ಧಾರಣೆ

ಅಕ್ಕಿ ಪೂನಮ್‌ಗೌರಿ45/-, ಅಕ್ಕಿ (ಜೀರಾ) 0% 72/-, ಅಕ್ಕಿ (ಜೆ.ಜೆ.ಎಲ್) 39/-, ಅಕ್ಕಿ ಬಿ.ಪಿ.ಟಿ ಸೋನಾ ಸ್ಟೀಮ್ 47/-, ಅಕ್ಕಿ ಆಲೂರ ಸಣ್ಣ 38/-, ಅಕ್ಕಿ ಸಾತ್ವಿಕ್ ಸ್ಟೀಮ್ 35/- ಅಕ್ಕಿ ದೋಸೆ 34.50/-, ಅಕ್ಕಿ ಸ್ವಸ್ತಿಕ್ 44/-, ಅಕ್ಕಿ ಸೋನಾ ನುಚ್ಚು 32.50/-, ಅಕ್ಕಿ ಅಭಿಲಾಷ 40/-, ಕೃಷಿ ಸುಣ್ಣ ಮಿನ್ ಶಕ್ತಿ 25 ಕೆ.ಜಿ 425/-, ಆಲ್‌ವಿನ್ ಟಾಪ್ ಪ್ಲಸ್ 250ಗ್ರಾಂ 620/-, ಅವತಾರ್ 500ಗ್ರಾಂ 510/-, ಬ್ಲೈಟೆಕ್ಸ್ 500ಗ್ರಾಂ. 450/- ಟಿಲ್ಟ್ 100 ಮಿ.ಲೀ 160/-, ಟಿಲ್ಟ್ 250 ಮಿ.ಲೀ 310/- ಅವತಾರ್ 250ಗ್ರಾಂ 265/-, ವೆಂಟ್ ಕೌಲ್ 63ಮಿಮಿ 20/- ಗ್ಲೈಪೋಸೆಟ್ 41% - ರೌಂಡಪ್ 1ಲೀ. 480/-, ಗ್ಲೈಪೋಸೆಟ್ 41% - ರೌಂಡಪ್500 ಮಿ.ಲೀ 250/-

## ಬಸ್-ಬೈಕ್ ಡಿಕ್ಕಿ; ಇಬ್ಬರಿಗೆ ಗಾಯ

**● ತತ್ವನಿಷ್ಠ, ಯಲ್ಲಾಪುರ:** ಬಸ್ ಗೆ ಬೈಕ್ ಡಿಕ್ಕಿ ಹೊಡೆದು ಬೈಕ್ ಸವಾರರಿಬ್ಬರು ಗಾಯಗೊಂಡ ಘಟನೆ ಘಟನೆ ತಾಲೂಕಿನ ಆರತಿಬೈಲ್ ಬಳಿ ನಡೆದಿದೆ. ಆರತಿಬೈಲಿನ ನಾಗರಾಜ ಬಾಬು ನಾಯ್ಕ ಇಡಗುಂದಿ ಕಡೆಗೆ ಹೋಗುವಾಗ ಏಕಾಏಕಿ ಮುನ್ಸೂಚನೆ ನೀಡದೇ ಬಲಕ್ಕೆ ಬೈಕ್ ತಿರುಗಿಸಿದ್ದಾರೆ. ಹಿಂದಿನಿಂದ ಬರುತ್ತಿದ್ದ ಕೆ.ಎಸ್.ಆರ್.ಟಿ.ಸಿ ಬಸ್ ಗೆ ಬೈಕ್ ಡಿಕ್ಕಿಯಾಗಿದ್ದು, ಸವಾರ ನಾಗರಾಜ ಹಾಗೂ ಬೈಕ್ ನ ಹಿಂಬದಿಯಲ್ಲಿ ಕುಳಿತ ಇನ್ನೊಬ್ಬ ವ್ಯಕ್ತಿಯೂ ಗಾಯಗೊಂಡಿದ್ದಾರೆ. ಎರಡೂ ವಾಹನಗಳು ಸ್ವಲ್ಪ ಪ್ರಮಾಣದಲ್ಲಿ ಜಖಂಗೊಂಡಿವೆ. ಬೈಕ್ ಸವಾರ ನಾಗರಾಜ ವಿರುದ್ಧ ಯಲ್ಲಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಇಂದು ಗಂಗಾಧರ ಕೊಳಗಿಗೆ ಪ್ರಶಸ್ತಿ ಪ್ರದಾನ

**● ತತ್ವನಿಷ್ಠ, ಸಿದ್ದಾಪುರ:** ಶ್ರೀ ಗುರು ರೇವಣಸಿದ್ಧೇಶ್ವರ ಸದ್ಭಾವನಾ ಸಿರಿ ಪ್ರಶಸ್ತಿಗೆ ತಾಲೂಕಿನ ಸಾಹಿತಿ ಹಾಗೂ ಹಿರಿಯ ಪತ್ರಕರ್ತ ಗಂಗಾಧರ ಕೊಳಗಿ ಆಯ್ಕೆಯಾಗಿದ್ದಾರೆ. ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ ಸಂಕಲ್ಪದಂತೆ ದ್ವಾದಶ ಪಟ್ಟಾಧಿಕಾರ ವರ್ಧಂತಿ ವರ್ಷಾಚರಣೆ ಪ್ರಯುಕ್ತ ಅ.1 ರಂದು ಸೊರಬ ತಾಲೂಕಿನ ಸುಕ್ಷೇತ್ರ ದುಗ್ಲಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ.

## ಅರ್ಜಿ ಆಹ್ವಾನ

● **ತತ್ವ ನಿಷ್ಠ, ಕಾರವಾರ:** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಮಕ್ಕಳ ದಿನಾಚರಣೆ-2025 ರ ಪ್ರಯುಕ್ತ ಮಕ್ಕಳು ತಮ್ಮ ಪ್ರಾಣದ ಹಂಗನ್ನು ತೊರೆದು ಹಾಗೂ ಸಮಯ ಪ್ರಜ್ಞೆಯಿಂದ ಇತರರ ಪ್ರಾಣದ ರಕ್ಷಣೆಗಾಗಿ ಧೈರ್ಯ ಸಾಹಸ ಪ್ರದರ್ಶಿಸಿದ 6 ರಿಂದ 18 ವರ್ಷದೊಳಗಿನ ಬಾಲಕರಿಗೆ "ಹೊಯ್ಸಳ" ಮತ್ತು ಬಾಲಕಿಯರಿಗೆ "ಕೆಳದಿ ಚೆನ್ನಮ್ಮ" ಶೌರ್ಯ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುತ್ತದೆ. ಪ್ರಕರಣವು ದಿನಾಂಕ: 01-08-2024 ರಿಂದ 31-07-2025 ರೊಳಗಡೆ ನಡೆದಿರಬೇಕು. ಪ್ರಶಸ್ತಿಗೆ ಆಯ್ಕೆಯಾದ ಮಕ್ಕಳಿಗೆ ತಲಾ ರೂ. 10,000 ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಲಾಗುವುದು. ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕನಿಷ್ಠ 5 ವರ್ಷಗಳ ಕಾಲ ಅತ್ಯುತ್ತಮ ಸೇವೆ ಸಲ್ಲಿಸಿರುವ ವ್ಯಕ್ತಿಗಳಿಗೆ ತಲಾ ರೂ. 25,000 ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಹಾಗೂ ಸಂಸ್ಥೆಗಳಿಗೆ ತಲಾ ರೂ. 1,00,000 ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಲಾಗುವುದು. ಮಕ್ಕಳ ದಿನಾಚರಣೆ-2025 ನೇ ಸಾಲಿನ ನಿಗದಿಪಡಿಸಿದ ಅರ್ಜಿ ನಮೂನೆಯನ್ನು ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಅಥವಾ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಚೇರಿಯಿಂದ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಅ.15 ರೊಳಗಾಗಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಾರವಾರ ಇವರಿಗೆ ಸಲ್ಲಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

## ಪ್ರಶಸ್ತಿಗೆ ಅರ್ಜಿ

● **ತತ್ವ ನಿಷ್ಠ, ಕಾರವಾರ:** ನಾವಿನ್ಯತೆ, ತಾರ್ಕಿಕ ಸಾಧನೆಗಳು, ಕ್ರೀಡೆ ಮತ್ತು ಕಲೆ, ಸಾಂಸ್ಕೃತಿಕ, ಸಂಗೀತ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದ 5 ರಿಂದ 18 ವರ್ಷ ವಯೋಮಾನದ ಮಕ್ಕಳನ್ನು ಗುರುತಿಸಿ 2025-26 ನೇ ಸಾಲಿನ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ ಯೋಜನೆಯಡಿ ಜಿಲ್ಲಾ ಮಟ್ಟದಲ್ಲಿ ಪ್ರಶಸ್ತಿಯನ್ನು ನೀಡಲಾಗುವುದು. ಆದ ಕಾರಣ ಜಿಲ್ಲೆಯಲ್ಲಿ ನೆಲೆಸಿರುವ ಮತ್ತು ಮೇಲ್ಕಂಡ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆಯನ್ನು ಮಾಡಿರುವ 5 ರಿಂದ 18 ವರ್ಷದೊಳಗಿನ ಅಂದರೆ ದಿ: 01-08-2007 ರಂದು ಹಾಗೂ ನಂತರ ಹುಟ್ಟಿದ ಮಕ್ಕಳು ಈ ಪ್ರಶಸ್ತಿಗೆ ಅರ್ಹರು. ಪ್ರಶಸ್ತಿಗೆ ಆಯ್ಕೆಯಾದ ಮಕ್ಕಳಿಗೆ ತಲಾ ರೂ. 10,000 ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ನೀಡಲಾಗುವುದು. ನಿಗದಿಪಡಿಸಿದ ಅರ್ಜಿ ನಮೂನೆಯನ್ನು ಸಂಬAಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಆಥವಾ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಚೇರಿಯಿಂದ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಅ.18 ರೊಳಗಾಗಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಾರವಾರ ಇವರಿಗೆ ಸಲ್ಲಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

# ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯ: ಬೆಲ್ಲದ್

## ಭ್ರಷ್ಟಾಚಾರವೇ ಸಾಧನೆ | ಕಾಂಗ್ರೆಸ್ ಸರಕಾರದ ವಿರುದ್ಧ ಅರವಿಂದ ವಾಗ್ದಾಳಿ

● **ತತ್ವ ನಿಷ್ಠ, ಕುಮಟಾ:** ರಾಜ್ಯ ಕಾಂಗ್ರೆಸ್ ಸರಕಾರ ಕೇವಲ ಭ್ರಷ್ಟಾಚಾರದಲ್ಲಿ ನಿರತವಾಗಿದೆ. ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ. ದಿನಕ್ಕೊಂದು ಹೊಸ ಹೊಸ ತೆರಿಗೆ ಹೇರಲಾಗುತ್ತಿದೆಯೇ ವಿನಾ ಅಭಿವೃದ್ಧಿ ಮಾಡುತ್ತಿಲ್ಲ. ಕುಮಟಾ ಹೊನ್ನಾವರಕ್ಕೆ ಕಳೆದ ಎರಡೂವರೆ ವರ್ಷದಲ್ಲಿ ಸರ್ಕಾರ ಒಂದೇ ಒಂದು ರೂಪಾಯಿ ಅನುದಾನ ನೀಡಿಲ್ಲ. ಭ್ರಷ್ಟಾಚಾರ ಹಾಗೂ ಅದನ್ನು ಮುಚ್ಚಿ ಹಾಕುವುದೇ ರಾಜ್ಯ ಸರ್ಕಾರದ ಕಾರ್ಯವಾಗಿದೆ. ಜನರ ಕಣ್ಣಿಗೆ ಮಂಕು ಬೂದಿ ಎರಚುತ್ತಿದೆ ಎಂದು ಧಾರವಾಡ ಶಾಸಕ, ವಿಧಾನಸಭೆಯ ವಿರೋಧ ಪಕ್ಷದ ಉಪ ನಾಯಕ ಅರವಿಂದ ಬೆಲ್ಲದ್ ಸರಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಅವರು ಸೇವಾ ಪಾಕ್ಷಿಕದ ನಿಮಿತ್ತ ಕುಮಟಾಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿ ಮಾತನಾಡಿದರು.

ರಾಜ್ಯದ ಬಹುತೇಕ ಎಲ್ಲ ರಸ್ತೆಗಳು ಹಾಳಾಗಿವೆ. ಸರಕಾರ ಯಾವುದೇ ಅನುದಾನವನ್ನು ಬಿಡುಗಡೆ ಮಾಡುತ್ತಿಲ್ಲ. ಜನರಿಗೆ ಬೇರೆ ಬೇರೆ ತೆರಿಗೆಯನ್ನು ವಿಧಿಸಲಾಗುತ್ತದೆಯೇ ವಿನಾ ಅಭಿವೃದ್ಧಿ ಮಾಡುತ್ತಿಲ್ಲ. ಭ್ರಷ್ಟಾಚಾರದ ಬಗ್ಗೆ ಜನರು ಗಮನಿಸಬಾರದು ಎಂಬ ಕಾರಣಕ್ಕೆ , ಜಾತಿ ಜಾತಿಗಳ ನಡುವೆ ಒಡಕು ಹುಟ್ಟಿಸುವ ಜಾತಿಗಣತಿಯನ್ನು ಸರಕಾರ ಮಾಡಿಸುತ್ತಿದೆ. ಈ ಕ್ಷಣದಲ್ಲಿ ಚುನಾವಣೆ ನಡೆದರೂ ಸರ್ಕಾರ ಮೂಲಗುಂಪಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಒಂದು ವರ್ಷದಲ್ಲಿಯೇ ಜನರು ಬೇಸತ್ತಿದ್ದಾರೆ. ಬೋವಿ ನಿಗಮದ ಅಧ್ಯಕ್ಷರು ಭ್ರಷ್ಟಾಚಾರದಲ್ಲಿ ಸೇರಿಕೊಂಡಿದ್ದು ರಾಜೀನಾಮೆ ನೀಡಿದ್ದಾರೆ. ಗುತ್ತಿಗೆದಾರರ ಸಂಘದ ಅಧ್ಯಕ್ಷರು ರಾಹುಲ್ ಗಾಂಧಿ ಅವರಿಗೆ ಆರೋಪ ಕಳುಹಿಸಿದ್ದಾರೆ. ಇವೆಲ್ಲವನ್ನೂ ಚಾಪೆ ಕೆಳಗೆ ಹಾಕಿಕೊಳ್ಳಲು ಕಾಂಗ್ರೆಸ್ ಸರಕಾರ ಪ್ರಯತ್ನ ಮಾಡುತ್ತಿದೆ ಎಂದು ಆರೋಪಿಸಿದರು.

ಕಾಂಗ್ರೆಸ್‌ಗೆ ಅಧಿಕಾರದ ಮದ ಏರಿದೆ. ರಸ್ತೆ ಸರಿಯಿಲ್ಲ ಎಂಬ ಕಾರಣಕ್ಕೆ ಬೆಂಗಳೂರಿನಿಂದ ವಿವಿಧ ಕಂಪನಿಗಳು ಬೇರೆಡೆ ಹೊರಡಲು ಸಿದ್ಧವಾಗಿದೆ. ಇದಕ್ಕೆ ಉಪಮುಖ್ಯಮಂತ್ರಿ ಯಾರು ಬೇಕಾದರೂ ಹೋಗಬಹುದು ಎಂದು ಉತ್ತರಿಸುತ್ತಾರೆ ಎಮದರು.

ಕುಮಟಾಕ್ಕೆ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಬಗ್ಗೆ ದಿನಕರ ಶೆಟ್ಟಿ ಅವರು ಸಾಕಷ್ಟು ಕಾರ್ಯ ಮಾಡಿದ್ದರು. ಆದರೆ ಕಾಂಗ್ರೆಸ್ ಸರ್ಕಾರ ಈಗ ಕಾಮಗಾರಿಯನ್ನು ನೆನೆಗುದಿಗೆ ಬಿಟ್ಟಿದೆ. ಶರಾವತಿ ಕೋಲ್ಡ್ ಸ್ಟೋರೇಜ್ ಯೋಜನೆಗೂ ಶಾಸಕರು ವಿರೋಧಿಸಿದ್ದು ನಾವು ಅವರ ಜೊತೆಗೆ ನಿಂತಿದ್ದೇವೆ ಎಂದರು. ನೆರೆಹಾನಿ, ಮಳೆ ಹಾನಿ, ಬೆಳೆ ಹಾನಿ ಭೂಕುಸಿತ ತಡೆಯುವ ಬಗ್ಗೆಯೂ ಯಾವುದೇ ಅನುದಾನ ಬಿಡುಗಡೆ ಮಾಡುತ್ತಿಲ್ಲ. ಈ ಬಗ್ಗೆ ಉಸ್ತುವಾರಿ ಸಚಿವರಿಗೂ ಚಿಂತೆ ಇಲ್ಲ. ಅನುದಾನ ನೀಡುತ್ತೇವೆ ಎಂದು ಸರ್ಕಾರ ಹೇಳುತ್ತದೆಯೇ ಹೊರತು ಒಂದು ರೂ. ಅನುದಾನವನ್ನೂ ಈವರೆಗೆ ಬಿಡುಗಡೆ ಮಾಡಿಲ್ಲ ಎಂದು ಬೇಸರಿಸಿದ್ದರು.ಪ್ರತಿಯೊಬ್ಬರಿಗೂ 10 ಕೆಜಿ ಅಕ್ಕಿ ಕೊಡುತ್ತೇವೆ ಎಂದು ಆಶ್ವಾಸನೆ ನೀಡಿದ ಮುಖ್ಯಮಂತ್ರಿ ಒಂದು ಕೆಜಿ ಅಕ್ಕಿಯನ್ನು ನೀಡುತ್ತಿಲ್ಲ. ಅನ್ನಭಾಗ್ಯದ ಹೆಸರಿನಲ್ಲಿ ಮೋದಿಯವರು ಕೊಡುತ್ತಿರುವ ಅಕ್ಕಿಯನ್ನೇ ತಮ್ಮದು ಎಂದು ಬಿಂಬಿಸುತ್ತಿದ್ದಾರೆ. ನಿಜವಾದ ಬಡವರ ಬಿಪಿಎಲ್ ಕಾರ್ಡ್ ರದ್ದು ಮಾಡುವ ಕಾರ್ಯ ಮಾಡಲಾಗುತ್ತಿದೆ. ಹೊಸ ರೇಷನ್ ಕಾರ್ಡ್ ಅನ್ನು ಹೊಸ ವಿಧವಾ ವೇತನಗಳನ್ನು ನೀಡಲಾಗುತ್ತಿಲ್ಲ. ಜನರ ಕಷ್ಟಗಳಿಗೆ ಸ್ಪಂದಿಸುವ ಯಾವ ಕಾರ್ಯವನ್ನೂ ಸರಕಾರ ಮಾಡುತ್ತಿಲ್ಲ ಎಂದು ದೂರಿದರು.




**ಯತ್ನಾಳ ಅವರನ್ನು ಪಕ್ಷಕ್ಕೆ ಕರೆದುಕೊಳ್ಳಬೇಕು ಬೇಡವೋ ಎಂಬುದನ್ನು ಪಕ್ಷದ ವರಿಷ್ಠರು ನಿರ್ಧರಿಸುತ್ತಾರೆ. ಪಕ್ಷದ ತತ್ವಕ್ಕೆ ಬದ್ಧರಾಗಿ ನಡೆದುಕೊಳ್ಳುವುದಷ್ಟೇ ನಮ್ಮ ಕಾರ್ಯ ಮುಂದಿನದನ್ನು ಹೈಕಮಾಂಡ್ ನಿರ್ಧಾರ ಮಾಡುತ್ತದೆ ಎಂದು ಪತ್ರಕರ್ತರ ಪ್ರಶ್ನೆಗೆ ಅರವಿಂದ್ ಬೆಲ್ಲದ್ ಉತ್ತರಿಸಿದರು.**

ವಿರೋಧ ಪಕ್ಷದ ನಾಯಕರ ಬದಲಾವಣೆ ಬಗ್ಗೆ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಪಕ್ಷದ ಕಾರ್ಯಕರ್ತನಾಗಿ, ಪಕ್ಷದ ಹಿರಿಯರು ಕೊಟ್ಟ ನಿರ್ದೇಶನದಂತೆ ಕೆಲಸ ಮಾಡುವುದನ್ನು ನಾನು ಮಾಡುತ್ತೇನೆ. ಮುಂದಿನದು ಪಕ್ಷದ ಹಿರಿಯರಿಗೆ ಬಿಟ್ಟ ವಿಚಾರ ಎಂದು ಅವರು ತಿಳಿಸಿದರು.

ಶಾಸಕ ದಿನಕರ ಶೆಟ್ಟಿ ಮಾತನಾಡಿ, ಸರಕಾರ ಬಿಪಿಎಲ್ ಕಾರ್ಡುಗಳನ್ನು ರದ್ದು ಮಾಡುವ ಕಾರ್ಯ ಮಾಡುತ್ತಿದೆ. ಧರ್ಮಸ್ಥಳ ಸಂಘದಲ್ಲಿ ಕಾರ್ಯ ನಿರ್ವಹಿಸುವವರಿಗೂ ಕಾರ್ಡ್ ಗಳನ್ನು ರದ್ದು ಮಾಡುವುದಾಗಿ ತಿಳಿಸಿದ್ದಾರೆ. ವರ್ಷಕ್ಕೆ 5-6 ಸಾವಿರ ರೂಪಾಯಿ ಜಾಸ್ತಿ ಆದದರೂ ಬಿ.ಪಿ.ಎಲ್ ಕಾರ್ಡ ರದ್ದು ಮಾಡಲು ಸರಕಾರ ಮುಂದಾಗಿದೆ. ಯಾವುದೇ ಇಲಾಖೆಯಲ್ಲಿ ಹಣವಿಲ್ಲದಂತಾಗಿದೆ. ಉತ್ತರಕನ್ನಡದ ಅಭಿವೃದ್ಧಿಗೆ ಒಂದು ಕೋಟಿ ರೂ. ಕೇಳಿದರೂ ಸರಕಾರದ ಬಳಿ ಹಣವಿಲ್ಲ. ಸಮುದ್ರ ಕೊರತೆ ತಡೆಗೋಡೆಗೆ ಒಂದು ರೂ. ಹಣ ನೀಡುತ್ತಿಲ್ಲ. ಸರಕಾರದ ಸಾಧನೆ ಶೂನ್ಯವಾಗಿದೆ. ಮುಖ್ಯಮಂತ್ರಿಗಳನ್ನದ್ದು ಕೇವಲ ಭಾಷಣವೇ ಆಗಿದೆ ಎಂದರು.

ಪಕ್ಷದ ಶಾಸಕರಿಗೆ 50 ಕೋಟಿ, ವಿರೋಧ ಪಕ್ಷದ ಶಾಸಕರಿಗೆ 25 ಕೋಟಿ ನೀಡುವುದಾಗಿ ಸರಕಾರ ಹೇಳಿದೆ. ಜನರು ಕಂಡ ಕಂಡಲ್ಲಿ ನಮ್ಮನ್ನು ಕೇಳುತ್ತಿದ್ದಾರೆ. ಆದರೆ ಒಂದು ರೂ. ಸಹ ಬಿಡುಗಡೆಯಾಗಿಲ್ಲ. ಜನರನ್ನು ದಾರಿ ತಪ್ಪಿಸುವ ಕಾರ್ಯ ವನ್ನು ಸರಕಾರ ಮಾಡುತ್ತಿದೆ. ಬಿಜೆಪಿ ಅವಧಿಯಲ್ಲಿ 1800 ಕೋಟಿ ಹಣ ತಂದು ಕ್ಷೇತ್ರದ ಅಭಿವೃದ್ಧಿ ಮಾಡಿದ್ದೇವೆ. ಆದರೆ ಕಾಂಗ್ರೆಸ್ ಸರಕಾರ ಒಂದು ರೂಪಾಯಿಗಳನ್ನೂ ನೀಡಿಲ್ಲ, ಸುಳ್ಳು ಮಾಹಿತಿಯನ್ನೂ ನೀಡುತ್ತಾರೆ. ಜನರು ಶಾಸಕರಾದ ನಮ್ಮನ್ನು ಬೈದುಕೊಂಡು ತಿರುಗುವಂತಾಗಿದೆ ಎಂದು ಅವರು ಆಕ್ರೋಶ ಹೊರಹಾಕಿದರು.

ಬಿಜೆಪಿ ಜಿಲ್ಲಾ ಅಧ್ಯಕ್ಷ ಎನ್. ಎಸ್ ಹೆಗಡೆ, ಕುಮಟಾ ಮಂಡಲಾಧ್ಯಕ್ಷ ಜಿ.ಐ ಹೆಗಡೆ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಶಾಂತ ನಾಯ್ಕ, ರಾಜ್ಯ ಶಿಕ್ಷಣ ಪ್ರಕೋಷ್ಠಾದ ಎಂ.ಜಿ ಭಟ್ಟ, ನಿಕಟಪೂರ್ವ ಜಿಲ್ಲಾಧ್ಯಕ್ಷ ವೆಂಕಟೇಶ ನಾಯ್ಕ, ಪ್ರಮುಖರಾದ ಡಾ. ಜಿ.ಜಿ ಹೆಗಡೆ, ಗೀತಾ ಹರಿಕಂತ್ರ, ವಿಶು ನಾಯ್ಕ, ಪವನ ಶೆಟ್ಟಿ ಹಾಗೂ ಇತರರು ಇದ್ದರು.

# ವಿಡಿಐಟಿಯಲ್ಲಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮ

● **ತತ್ವ ನಿಷ್ಠ, ಹಳಿಯಾಳ:** ಕೆಎಲ್‌ಎಸ್ ವಿ.ಡಿ.ಐ.ಟಿ. ಕಾಲೇಜಿನಲ್ಲಿ ದಸರಾ ಹಬ್ಬದ ಅಂಗವಾಗಿ ಸೆಪ್ಟೆಂಬರ್ 29 ಮತ್ತು 30ರಂದು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

ಸೆ. 29ರಂದು ಶಾಸ್ತ್ರೀಯ ಸಂಗೀತ, ವಾದ್ಯ ವಾದನ ಮತ್ತು ನೃತ್ಯ ಪ್ರದರ್ಶನಗಳು ಜರುಗಿದವು. ಶ್ರೀಹರಿ, ಅನನ್ಯ, ಭವಾನಿ, ಪ್ರತಿಕ್ಷಾ, ಶ್ರೇಯಸ್, ಅನುಶ್ರೀ, ವಸುಧಾ, ನೋದಿತಾ, ಸುಪ್ರೀತಾ, ಸ್ನೇಹಾ ಭಕ್ತಿ ಗೀತೆಗಳನ್ನು ಸಾದರಪಡಿಸಿದರು.

ಭುವನ್, ಶ್ರೇಯಸ್, ಅನುಶ್ರೀ, ನೋದಿತಾ ಕೊಳಲು, ತಬಲ, ಹಾರ್ಮೋನಿಯಂ ಹಾಗೂ ತಾಳ ವಾದ್ಯಗಳನ್ನು ನುಡಿಸಿ ಪ್ರೇಕ್ಷಕರನ್ನು ಮನರಂಜಿಸಿದರು. ರೋಹಿಣಿ, ಸಮನ್ವಿತಾ, ಭವಾನಿ, ಅಪೂರ್ವ ಭಾರತೀಯ ಶಾಸ್ತ್ರೀಯ ನೃತ್ಯವನ್ನು ಸಾದರಪಡಿಸಿ ಮೆಚ್ಚುಗೆ ಗಳಿಸಿದರು.

ಸೆ. 30ರಂದು ದಾಂಡಿಯಾ ನೃತ್ಯ ಆಯೋಜಿಸಲಾಯಿತು. ಸುರಕ್ಷಾ ತಂಡ, ಅಭಿಷೇಕ್ ತಂಡ, ಸಾಕ್ಷತಾ ತಂಡ, ಸ್ನೇಹಾ ತಂಡ, ಶ್ವೇತಾ ತಂಡ ಹಾಗೂ ಮಹಿಳಾ ಸಿಬ್ಬಂದಿಗಳ ತಂಡಗಳು ಬಣ್ಣ ಬಣ್ಣದ ದಾಂಡಿಯಾ ನೃತ್ಯವನ್ನು ಪ್ರದರ್ಶಿಸಿ ಉತ್ಸಾಹ ತುಂಬಿದವು.



ಈ ಕಾರ್ಯಕ್ರಮಗಳನ್ನು ಡಾ. ಸ್ನೇಹ ಕುಲಕರ್ಣಿ ಮತ್ತು ಸುನಿಲ್ ಯರಗಟ್ಟಿ ಸಂಯೋಜಿಸಿದರು. "ದಸರಾ ಹಬ್ಬದ ಪ್ರಯುಕ್ತ ಭಾರತೀಯ ಸಂಸ್ಕೃತಿಯ ಶ್ರೀಮಂತಿಕೆಯನ್ನು ಬಿಂಬಿಸುವ ಉದ್ದೇಶದಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದೇವೆ" ಎಂದು ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸು ಡೊ ಕು 05

| | | | | | | | | |
|---|---|---|---|---|---|---|---|---|
| | | 6 | | 5 | 2 | 7 | 3 | 4 |
| | 9 | | | 3 | 1 | | | |
| | 3 | | | 6 | 4 | | | |
| 1 | 7 | 4 | | 8 | | | | |
| | 5 | | | 2 | 3 | | | |
| | | 3 | | | | | | 9 |
| | | 1 | | | 6 | 5 | | 7 |
| | 6 | | | | 8 | 1 | | |
| | | | | 1 | 5 | | | 8 |

ಈ ಸುಡೊಕು ಸಂಖ್ಯಾಬಂಧದಲ್ಲಿರುವ ಎಲ್ಲ ಸಾಲುಗಳಲ್ಲಿ ಮತ್ತು ಕಂಬಗಳಲ್ಲಿ ಒಂದರಿಂದ ಒಂಬತ್ತರ ತನಕ ಅಂಕಿಗಳಿರಬೇಕು. ಪ್ರತಿ 3x3 ಬಾಕ್ಸ್‌ನಲ್ಲೂ ಒಂದರಿಂದ ಒಂಬತ್ತರೊಳಗಿನ ಅಂಕಿಗಳಿರಬೇಕು ಮತ್ತು ಯಾವುದೇ ಅಂಕಿ ಪುನರಾವರ್ತನೆ ಆಗಬಾರದು.

### ಸುಡೊಕು 4ರ ಉತ್ತರ

| | | | | | | | | |
|---|---|---|---|---|---|---|---|---|
| 6 | 8 | 7 | 2 | 5 | 1 | 9 | 3 | 4 |
| 2 | 5 | 4 | 7 | 3 | 9 | 8 | 1 | 6 |
| 9 | 3 | 1 | 8 | 6 | 4 | 7 | 2 | 5 |
| 8 | 9 | 2 | 5 | 1 | 6 | 3 | 4 | 7 |
| 4 | 1 | 3 | 9 | 7 | 8 | 5 | 6 | 2 |
| 5 | 7 | 6 | 3 | 4 | 2 | 1 | 9 | 8 |
| 7 | 2 | 9 | 6 | 8 | 3 | 4 | 5 | 1 |
| 1 | 6 | 5 | 4 | 9 | 7 | 2 | 8 | 3 |
| 3 | 4 | 8 | 1 | 2 | 5 | 6 | 7 | 9 |

## ಅಗ್ನಿ ಅವಘಡ ಘಟನೆ: ಸಂಸದರಿಂದ ಸಾಂತ್ವನ



● **ತತ್ವ ನಿಷ್ಠ, ಶಿರಸಿ:** ತಾಲೂಕಿನ ಇಟುಗುಳಿ ಗ್ರಾಮದ ಮರ್ಕಿಕೊಡ್ಲುನಲ್ಲಿ ಇತ್ತೀಚೆಗೆ ಸಂಭವಿಸಿದ ಸಿಲಿಂಡರ್ ಸ್ಫೋಟದಿಂದ ಉಂಟಾದ ಅಗ್ನಿ ಅವಘಡ ದುರಂತ ಉಂಟಾದ ಸ್ಥಳಕ್ಕೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಭೇಟಿ ನೀಡಿ, ಘಟನೆಯಿಂದ ಮೃತಪಟ್ಟ ಯುವತಿಯ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿ ಧೈರ್ಯ ತುಂಬಿದರು.

ಇಟಗುಳಿ ಗ್ರಾಪಂ ಸದಸ್ಯೆ ಗೀತಾ ಭೋವಿ, ತಾಪಂ ಮಾಜಿ ಸದಸ್ಯ ರವಿ ಹೆಗಡೆ ಹಳದೋಡ ಮತ್ತಿತರರು ಇದ್ದರು.

## ಸಂಸದ ಕಾಗೇರಿಯಿಂದ ಮಾರಿಕಾಂಬೆ ದೇವಿ ದರ್ಶನ



● **ತತ್ವ ನಿಷ್ಠ, ಶಿರಸಿ:** ನವರಾತ್ರಿ ಹಬ್ಬದ ಪ್ರಯುಕ್ತ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಕುಟುಂಬ ಸಮೇತರಾಗಿ ಶ್ರೀಮಾರಿಕಾಂಬಾ ದೇವಸ್ಥಾನಕ್ಕೆ ಭೇಟಿ ನೀಡಿ ದೇವಿಯ ದರ್ಶನ ಪಡೆದರು

ನಗರ ಮಂಡಲ ಅಧ್ಯಕ್ಷ ಆನಂದ್ ಸಾಲೇರ್, ಪ್ರಧಾನಕಾರ್ಯದರ್ಶಿ ನಾಗರಾಜ್ ನಾಯ್ಕ, ನಗರ ಸಭೆಯ ಉಪಾಧ್ಯಕ್ಷ ರಮಾಕಾಂತ್ ಭಟ್, ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ರಾಘವೇಂದ್ರ ಶೆಟ್ಟಿ, ಯುವ ಮೋರ್ಚಾ ಉಪಾಧ್ಯಕ್ಷ ನಿತಿನ್ ರಾಯ್ಕರ್ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಶಾಸಕ ದಿನಕರ ಶೆಟ್ಟಿ ನಡೆಗೆ ಬೇಸರ | ಪ್ರಕರಣದ ಮಾಹಿತಿ ನೀಡಿದ ಜೆಡಿಎಸ್ ಮುಖಂಡ**

# ಮೈತ್ರಿ ಧರ್ಮ ಪಾಲಿಸಿ, ಮಾತಿನಲ್ಲಿಹಿಡಿತವಿರಲಿ : ಸೂರಜ್ ಸೋನಿ

● **ತತ್ವ ನಿಷ್ಠ, ಕುಮಟಾ:** ಬಿಜೆಪಿ ಹಾಗೂ ಜೆಡಿಎಸ್ ಪಕ್ಷ ಮೈತ್ರಿಯಲ್ಲಿ ಸಾಗುತ್ತಿದೆ. ನಾವು ಹಾಗಾಗಿ ಯಾವುದೇ ಮಾತುಗಳನ್ನೂ ಆಡುತ್ತಿಲ್ಲ. ನಮ್ಮ ನಮ್ಮ ಪಕ್ಷ ನಮಗೆ ಪ್ರಾಮುಖ್ಯವೇ ಆದರೂ, ಮೈತ್ರಿ ಧರ್ಮದ ಪಾಲನೆ ಆಗಬೇಕಾಗಿದೆ. ಇದು ಅಷ್ಟು ಸುಲಭವಲ್ಲ. ಸೂಕ್ಷ್ಮ ವಿಚಾರ. ಅದನ್ನು ಮೀರಿ, ನಮನ್ನು ಕೆಣಕಿದರೆ, ಜೆಡಿಎಸ್ ಹಾಗೂ ಬಿಜೆಪಿ ಮುಖಂಡರ ಗಮನಕ್ಕೆ ತಂದು ನಾವೂ ಮಾತನಾಡಬೇಕಾಗುತ್ತದೆ ಎಂದು ಜೆಡಿಎಸ್ ಮುಖಂಡ ಹಾಗೂ ಕೋರ್ ಕಮಿಟಿ ಸದಸ್ಯ ಸೂರಜ್ ನಾಯ್ಕ ಸೋನಿ ಎಚ್ಚರಿಸಿದರು.

ಅವರು 2023ರ ಚುನಾವಣಾ ಸಂಬಂಧ ಉಚ್ಚನ್ಯಾಯಾಲಯದ ತೀರ್ಪಿನ ನಂತರದ ಬಿಜೆಪಿ ವಿಜಯೋತ್ಸವ ಹಾಗೂ ಶಾಸಕರ ಹೇಳಿಕೆಯ ಕುರಿತಾಗಿ ಪ್ರತಿಕ್ರಿಯಿಸಿ, ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣದ ಮಾಹಿತಿಯನ್ನು ಹಂಚಿಕೊಂಡು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

2023ರ ಚುನಾವಣಾ ಮತ ಎಣಿಕೆಗೆ ಸಂಬಂಧಿಸಿದಂತೆ ಉಚ್ಚನ್ಯಾಯಾಲಯದ ತೀರ್ಪಿನ ನಂತರದಲ್ಲಿ ಕುಮಟಾದಲ್ಲಿ ಸಂಭ್ರಮಾಚರಣೆ ಮಾಡಲಾಯಿತು. ಅದರಲ್ಲಿ ಶಾಸಕರು ಮಾತನಾಡಿ, ಕಣ್ಣೀರು ಹಾಕುತ್ತಾರೆ. ಅಲ್ಪ ಮತದಲ್ಲಿ ಮುಂದಿದ್ದರು ಎಂದೆಲ್ಲ ಹೇಳಿಕೆ ನೀಡಿದ್ದಾರೆ. ನನ್ನ ಜೊತೆಗೆ ಕುಮಾರಸ್ವಾಮಿ, ದೇವೇಗೌಡ, ನಿಖಿಲ್ ಕುಮಾರಸ್ವಾಮಿ, ನನ್ನ ಗೆಳೆಯರ ಬಳಗದವರು ಇದ್ದಾರೆ. ಹಾಗಿದ್ದೂ ಕಣ್ಣಲ್ಲಿ ನೀರು ಹಾಕುವ ಜಾಯಮಾನ ನಿಮ್ಮದಿರಬಹುದು ನನ್ನದಲ್ಲ ಎಂದ ಸೂರಜ್ ನಾಯ್ಕ ಸೋನಿ, ಕ್ಷೇತ್ರದಲ್ಲಿ ನನ್ನ ನೆಲೆ ಜನ ಭರವಸೆ ಇಟ್ಟಿದ್ದಾರೆ. ಹೀಗಾಗಿ ನಾನು ಈ ಮಟ್ಟಕ್ಕೆ ಬೆಳೆದು ನಿಂತಿದ್ದೇನೆ. ನೀವು ಇಪ್ಪತ್ತು ಮತ, ಆರುನೂರು ಮತದಲ್ಲಿ ಗೆದ್ದು ಅದನ್ನೇ ಸಂಭ್ರಮಿಸುತ್ತೀರಿ, ಆದರೆ ಒಮ್ಮೆಯೂ ಚುನಾವಣೆಯಲ್ಲಿ ಗೆಲ್ಲದಿದ್ದರೂ 59 ಸಾವಿರ ಮತವನ್ನು ನಾನು ಪಡೆದುಕೊಂಡಿದ್ದೇನೆ. ಚುನಾವಣಾ ಮತ ಎಣಿಕೆಯಲ್ಲಿ 7-17 ನೇ ಸುತ್ತಿನ ವರೆಗೂ ನಾನು ಮುಂದಿದ್ದೆ. ಇದರಲ್ಲಿ ನನ್ನ ಹೋರಾಟವೂ ಇದೆ. ಹೀಗಾಗಿ ಹಗುರವಾಗಿ ಮಾತನಾಡಬೇಡಿ, ಮೈತ್ರಿಧರ್ಮವೂ ಇರುವುದರಿಂದ ಅದರ ಪಾಲನೆ ಕಲಿಯಿರಿ ಎಂದರು.




ಚುನಾವಣಾ ಮತ ಎಣಿಕೆಯ ನಂತರದಲ್ಲಿ ನಾವು ನ್ಯಾಯಾಲಯದ ಮೆಟ್ಟಿಲೇರಿದ್ದು ಏಕೆ ಎಂಬ ಬಗ್ಗೆ ವಿವರಿಸಿದ ಸೂರಜ್ ನಾಯ್ಕ ಸೋನಿ, ಚುನಾವಣಾ ಅಧಿಕಾರಿಯಾಗಿದ್ದ ಜಿಲ್ಲಾಧಿಕಾರಿ ಅವರ ಇಲಾಖಾ ವೆಬ್ಸೈಟ್ ನಲ್ಲಿ ಚುನಾವಣೆ ನಡೆದ ರಾತ್ರಿ, 10-05-2023 ರಂದು ಕುಮಟಾ ಕ್ಷೇತ್ರದಲ್ಲಿ ನಿಖರವಾಗಿ 1,45,336 ಮತ ಚಲಾವಣೆಯಾಗಿದೆ ಎಂದು ಹಾಕಿದ್ದಾರೆ. ಆದರೆ ಮೇ 13ನೇ ತಾರೀಖಿನ ಚುನಾವಣಾ ಮತ ಎಣಿಕೆಯ ದಿನ, 1,46,606 ಇವಿಎಂ ಓಟುಗಳು ಚಲಾವಣೆಯಾಗಿದೆ ಎಂದು ಮಾಹಿತಿ ನೀಡಿದ್ದಾರೆ. 1,270 ವೋಟುಗಳು ಹೆಚ್ಚಿಗೆ ಕಾಣುತ್ತಿದೆ. ಅಲ್ಲಿಂದ ನಮಗೆ ಏನೋ ನಡೆದಿದೆ ಎಂದು ಮನವರಿಕೆ ಆಗತೊಡಗಿತು. ಇದಕ್ಕೆ ಸಂಬಂಧಿಸಿದಂತೆ ನಮಗೆ 17ಎ. ಪಟ್ಟಿಯ ಅಗತ್ಯತೆ ಇತ್ತು. ಆದರೆ ಈ ದಾಖಲೆಗಳನ್ನು ಕೇಳಿದರೆ ಅವರು ಕೊಟ್ಟಿಲ್ಲ. ಹೈಕೋರ್ಟ ನಲ್ಲಿಯೂ ಈ ಮಾಹಿತಿ ಕೇಳಿದಾಗ ಅದು ಸ್ಟಾಂಗ್ ರೂಂಮ್ ಸೇರಿದೆ ಎಂದು ಮಾಹಿತಿ ನೀಡಿದರು. ಇದೆಲ್ಲವನ್ನೂ ನಾವು ರಿಟ್ ಅರ್ಜಿಯಲ್ಲಿ ಸೇರಿಸಿದ್ದೇವೆ ಎಂದರು.

ಇದರ ಜೊತೆಗೆ ಹತ್ತು ಹಲವಾರು ನ್ಯೂನ್ಯತೆಗಳ ಬಗ್ಗೆ ನಾವು ಅರ್ಜಿ ಹಾಕಿದ್ದೇವೆ. ಚುನಾವಣಾ ಮತ ಎಣಿಕೆ ದಿನ ಬೆಳಗ್ಗೆ 10 ರಿಂದ 10:45 ರ ವರೆಗೆ ನಮ್ಮ ಮತ ಎಣಿಕೆ ಕೇಂದ್ರದಲ್ಲಿ ವೀಡಿಯೋ ರೆಕಾರ್ಡಿಂಗ್ ಆಗಿಲ್ಲ. ಮೊದಲು ನಾವು ಅದನ್ನು ಕೇಳಿದಾಗ ಅವರು ನಮಗೆ ವೀಡಿಯೋ ಕೊಟ್ಟಿರಲಿಲ್ಲ. ನಂತರದಲ್ಲಿ ಅದನ್ನು ನೀಡಿದರು. ಹೈಕೋರ್ಟ ಎಫ್.ಎಸ್.ಎಲ್ ಆಗಿಲ್ಲವೆಂದು ವೀಡಿಯೋವನ್ನು ಪರಿಗಣಿಸಿಲ್ಲ. ಮೂಲವಾಗಿ ವೀಡಿಯೋ ರೆಕಾರ್ಡಿಂಗ್ ಮಾಡಿದ್ದ ಚುನಾವಣಾ ಆಯೋಗದವರು ಎಫ್.ಎಸ್.ಎಲ್ ಮಾಡಬೇಕಿತ್ತು. ನ್ಯಾಯದೇವತೆಗಳ ಎದುರಿನಲ್ಲಿ ನಾವು ಅದನ್ನು ಪ್ತಶ್ನೆಮಾಡಲು ಆಗುವುದಿಲ್ಲ ಹೀಗಾಗಿ ನಮಗೆ 17ಎ. ಮತ್ತು ವೀಡಿಯೋ ದಾಖಲೆ ಸಾದ್ಯವಾಗಲಿಲ್ಲ ಎಂದರು.

ಚುನಾವಣೆಯಲ್ಲಿ ಪ್ರತೀ ಬೂತ್ ಗೆ ಮೂರು ಮಶೀನ್ ಅಳವಡಿಸಲಾಗುತ್ತದೆ. ಕಂಟ್ರೋಲ್, ಬ್ಯಾಲೆಟಿಂಗ್, ವಿ.ವಿ ಪ್ಯಾಡ್ ಗಳು ಇರುತ್ತದೆ. ಅದಕ್ಕೆ ಯು.ಐ.ಎನ್ ನಂಬರ್ ಇದ್ದು, ಪ್ರತೀ ಬೂತ್ ಗೆ ಬೇರೆಬೇರೆ ಇರುತ್ತದೆ. ಓಟಿಂಗ್ ದಿನ ಮಶೀನ್ ನಲ್ಲಿ ದೋಷಗಳಿದ್ದರೆ, ಅದಕ್ಕೆ ರಿಪ್ಲೇಸ್ಮೆಂಟ್ ರಿಪೋರ್ಟ ಮಾಡಲಾಗುತ್ತದೆ. ಚುನಾವಣಾ ಆಯೋಗದ ವರದಿ ಪ್ರಕಾರ ಅಧಿಕೃತವಾಗಿ 10 ಮಶೀನ್ ಗಳು ಬದಲಾವಣೆ ಮಾಡಲಾಗಿದೆ. ಆದರೆ ಅವರು ಕೊಟ್ಟ 17ಸಿ ವರದಿಯಲ್ಲಿ 21 ಮಶೀನ್ ಬದಲಾವಣೆಯಾಗಿರುವುದು ಕಂಡುಬರುತ್ತದೆ. ರಾಂಡಮೈಜೇಶನ್ ಲಿಸ್ಟ್ ಹಾಗೂ 17ಸಿ ಯನ್ನು ಗಮನಿಸಿದಾಗ 21 ಮಶೀನ್ ಬದಲಾವಣೆ ಮಾಡಿರುವುದು ಕಂಡುಬರುತ್ತದೆ ಎಂದರು.

ಈ ಬಗ್ಗೆ ಸೂಕ್ತ ಮಾಹಿತಿ ಒದಗಿಸುವಂತೆ ಕೇಳಿದ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಸೂರಜ್ ನಾಯ್ಕ ಸೋನಿ, ಯಾವ ಯಾವ ಬೂತ್ ಗಳಿಗೆ ಯಾವ ಯಾವ ಮೆಷಿನ್ ಕೊಟ್ಟಿದ್ದಾರೆ ಎಂಬ ವರದಿಯನ್ನು ಮೊದಲೇ ನೀಡಲಾಗುತ್ತದೆ. ಸೆಕೆಂಡ್ ರಾಂಡಮೈಜೇಶನ್ ಲಿಸ್ಟ್ ನ ಪರೀಕ್ಷೆ ಜೊತೆಗೆ ರಿಸರ್ವ ಲಿಸ್ಟ್ ನೀಡಲಾಗುತ್ತದೆ. ಒಟ್ಟೂ 65 ಮಶೀನ್ ಗಳನ್ನು ರಿಸರ್ವ ಲಿಸ್ಟ್ ನಲ್ಲಿ ಇಡಲಾಗಿತ್ತು. ಆದರೆ ಕುಮಟಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎರಡು ಬೆಳವಣಿಗೆ ಬಹುದೊಡ್ಡ ಆಶ್ಚರ್ಯ, 7ಸಿ. ನಮಗೆ ಸಿಕ್ಕು ಪರೀಕ್ಷಿಸಿದಾಗ 21 ಕಡೆ ಮಶೀನ್ ಬದಲಾಗಿದ್ದು, ರಿಟನಿಂಗ್ ಆಫೀಸರ್ ಹೇಳಿಕೆ ಪ್ರಕಾರ ಕೇವಲ 10 ಮಶೀನ್ ಬದಲಾವಣೆ ಬಗ್ಗೆ ದಾಖಲೆ ಇಟ್ಟಿದ್ದಾರೆ. ಹಾಗಾದರೆ 10 ಮಷೀನ್ ರಿಸರ್ವ ಲಿಸ್ಟ್ ಇಂದ ಹೇಗೆ ಹೋಗಿದೆ? ಎಂದು ಪ್ರಶ್ನಿಸಿದ ಅವರು, ಇದು ಈ ರೀತಿ ಆಗಲು ಸಾಧ್ಯವೇ ಇಲ್ಲ ಎಂದರು.

ಬಹುದೊಡ್ಡ ಬೆಳವಣಿಗೆಯಲ್ಲಿ, ಅವರು ರಿಪ್ಲೇಸ್ಮೆಂಟ್ ಲಿಸ್ಟ್ ನಲ್ಲಿ ಬೂತ್ ನಂ.39 ಬದಲಾವಣೆ ಬಗ್ಗೆ ಮಾಹಿತಿ ನೀಡಿದ್ದಾರೆ. ಆದರೆ ಆ ಬೂತ್ ನಂ.39 ನಲ್ಲಿ ಒಟ್ಟೂ 1,000 ಓಟುಗಳು ಬಿದ್ದಿದೆ. ಬೂತ್ ನಂ.39 ರಿಪ್ಲೇಸ್ಮೆಂಟ್ ಲಿಸ್ಟ್ ನಲ್ಲಿ ಇದ್ದು, ಆದರೆ ಮಷೀನ್ ರಿಸರ್ವ ಲಿಸ್ಟ್ ನಿಂದಲೇ ಹೋಗಿಲ್ಲ. ಮಷಿಮ್ ಹೊರಗಿನಿಂದ ಬಂದಿದ್ದು, ಹೀಗಾಗಿ ನಮಗೆ ಧೈರ್ಯ ಇತ್ತು. ಈ ಬಗ್ಗೆ ಮೊದಲೇ ಮಾಹಿತಿ ನೀಡಬಹುದಿತ್ತು. ಆದರೆ ನಾನು ಮೈತ್ರಿ ಧರ್ಮದಲ್ಲಿ ಇದ್ದ ಕಾರಣ ಈ ಬಗ್ಗೆ ಯಾವುದೇ ಪತ್ರಿಕಾಗೋಷ್ಠಿ ಮಾಡಿರಲಿಲ್ಲ ಎಂದರು.

ಉಚ್ಚನ್ಯಾಯಾಲಯಕ್ಕೆ ಹೋಗುವೆ: ಕಾನೂನಿನ ಅಡಿಯಲ್ಲಿ ನ್ಯಾಯಾಲಯ ಗಮನಿಸುತ್ತದೆ. ನ್ಯಾಯಾಲಯದ ತೀರ್ಪನ್ನು ಗೌರವಿಸುತ್ತೇನೆ. ಅವುಗಳನ್ನು ಪ್ರಶ್ನಿಸುವ ಹಕ್ಕಿದೆ. ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗುವ ತೀರ್ಮಾನ ತೆಗೆದುಕೊಳ್ಳುತ್ತೇನೆ. ಸತ್ಯವನ್ನು ತಡಮಾಡಿದರೆ ಅದನ್ನು ತಡೆಹಿಡಿದಂತೆ ಎಂಬ ಮಾತಿದೆ. ಹೀಗಾಗಿ ಸುಪ್ರೀಂ ಕೋರ್ಟಗೆ ಹೋಗಿ, ಬೂತ್ ನಂ.39 ನ್ನು ಅನರ್ಹ ಗೊಳಿಸಿ, ಆಯ್ಕೆ ನನಗೆ ಮಾಡಲು ಅವಕಾಶ ಇದೆಯೇ ಎಂದು ನೋಡುತ್ತಿದ್ದೇವೆ ಎಂದು ಸೂರಜ್ ನಾಯ್ಕ ಸೋನಿ ತಿಳಿಸಿದರು.

ಶಾಸಕರಿಗೇ ಅನುಮಾನವಿತ್ತೇ?: ಮೇ 13ಕ್ಕೆ ಶಾಸಕರ ಗೆಲುವು ಎಂದು ನಿರ್ಧಾರವಾಗಿತ್ತು. ಅದರ ವಿರುದ್ಧವೇ ನಾವು ರಿಟ್ ಅರ್ಜಿ ಸಲ್ಲಿಸಿದ್ದೆವು. ಅದು ವಜಾ ಆದನಂತರ ಅವರು ಮಾಡಿದ ಸಂಭ್ರಮ ಮತ್ತು ಅವರು ಕೊಟ್ಟ ಹೇಳಿಕೆಗಳು ನನಗೆ ನೋವು ತಂದಿದೆ. ಶಾಸಕರು ವಿಜಯೋತ್ಸವದಲ್ಲಿ ಜನರ ಮುಂದೆ ಕಣ್ಣೀರು ಹಾಕುತ್ತಿದ್ದರು ಎಂದಿರುವುದು ಹಾಗೂ ಎರಡು ಬೂತ್ ಗಳಲ್ಲಿ ಸಮಸ್ಯೆ ಇತ್ತು ಎಂದಿರುವುದು ಬೇಸರದ ಸಂಗತಿ. 2023 ರಲ್ಲಿ ವಿಜಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿಲ್ಲ ಎಂದು ಹೇಳಿಕೊಂಡಿದ್ದಾರೆ. ಆಗ ನಮ್ಮ ಮೈತ್ರಿ ಇರಲಿಲ್ಲ. ಆದರೆ ಅವರು ಮೊದಲೇ ಏಕೆ ವಿಜ್ರಂಭಣೆಯಿಂದ ಆಚರಿಸಿಲ್ಲ. ತಮ್ಮ ಗೆಲುವಿನಲ್ಲಿ ಏನಾದರೂ ತಪ್ಪಿತೆಂದು ಇವರಿಗೆ ಮೊದಲೇ ತಿಳಿದಿತ್ತೇ? ಅದರಲ್ಲಿ ಇವರೂ ಪಾಲುದಾರರಾಗಿದ್ದರೇ? ಎನಿಸುತ್ತಿದೆ ಎಂದ ಸೂರಜ್ ನಾಯ್ಕ ಸೋನಿ, ಅಲ್ಲಿ ನಡೆದಿರುವುದರ ಬಗ್ಗೆ ಇವರಿಗೂ ತಿಳಿದಿತ್ತು. ಹೀಗಾಗಿ ಅವರು ಆಗ ಸಂಭ್ರಮಾಚರಣೆ ಮಾಡದೇ ಈಗ ವಿಜಯೋತ್ಸವ ಮಾಡುತ್ತಿದ್ದಾರೆ. ಇದು ವಿಚಿತ್ರ ಎನಿಸುತ್ತಿದೆ ಎಂದರು.

ಮೈತ್ರಿ ಧರ್ಮ ಬಿಟ್ಟಿದ್ದು ಬೇಸರ: ಈ ಪ್ರಕರಣ ದಾಖಲಿಸುವ ಮೊದಲು ಬಿಜೆಪಿ ಜೆಡಿಎಸ್ ಮೈತ್ರಿ ಇರಲಿಲ್ಲ. ಮೈತ್ರಿಯ ನಂತರದಲ್ಲಿ ನಾವು ಈ ಪ್ರಕರಣದ ಬಗ್ಗೆ ಯಾವುದೇ ಪತ್ರಿಕಾಗೋಷ್ಠಿಯನ್ನು ಮಾಡಿಲ್ಲ. ಮೈತ್ರಿ ಧರ್ಮವನ್ನು ನಮ್ಮ ಪಕ್ಷದವರು ಕಾಪಾಡಿಕೊಂಡು ಬಂದಿದ್ದೇವೆ. 2024 ರ ಎಂ.ಪಿ ಚುನಾವಣೆಯಲ್ಲಿ ನಾವು ಸಂಪೂರ್ಣವಾಗಿ ಬಿಜೆಪಿ ಜೊತೆಗೆ ಕೆಲಸ ಮಾಡಿ, ಅವರ ಗೆಲುವಿನಲ್ಲಿ ನಾವು ಪಾಲುದಾರರಾಗಿದ್ದೇವೆ. ಈ ಬಗ್ಗೆ ಕಾಗೇರಿಯವರೂ ಹೇಳಿದ್ದಾರೆ. ಆದರೆ ಮೈತ್ರಿ ಧರ್ಮವನ್ನು ಬಿಟ್ಟು, ಬಿಜೆಪಿ ಪಕ್ಷದ ಶಾಸಕರಾಗಿ, ಗೌರವಾನ್ವಿತ ಸ್ಥಾನದಲ್ಲಿದ್ದೂ ಇಂತಹ ಸಂದರ್ಭಗಳಲ್ಲಿ ವಿಜಯೋತ್ಸವ ಆಚರಿಸುತ್ತಾರೆ. ವಿಜೃಂಭಣೆಯಿಂದ ನಡೆದುಕೊಳ್ಳುತ್ತಾರೆ ಎಂದರೆ ಅವರ ಮನಸ್ಥಿತಿ ಏನು? ಎಂಬುದು ನನಗೆ ಅರ್ಥವಾಗಿದೆ ಎಂದು ಸೋನಿ ತಿಳಿಸಿದರು.

ಕುಮಟಾ ತಾಲೂಕಾ ಅಧ್ಯಕ್ಷ ಸಿ.ಜಿ ಹೆಗಡೆ, ಹೊನ್ನಾವರ ತಾಲೂಕಾ ಅಧ್ಯಕ್ಷ ಟಿ.ಟಿ ನಾಯ್ಕ, ಜೆ.ಡಿ.ಎಸ್ ಮುಖಂಡ ದತ್ತಾತ್ರಯ ಪಟಗಾರ, ಗೋವಿಂದ ಗೌಡ, ಅಣ್ಣಪ್ಪ ನಾಯ್ಕ, ರಾಘವೇಂದ್ರ ನಾಯ್ಕ, ಸಂಕೇತ ನಾಯ್ಕ ಹಾಗೂ ಇತರರು ಇದ್ದರು.

## ಸಂಪಾದಕೀಯ

# ಪಕ್ಷದ ಹೈಕಮಾಂಡ್ ನಾಯಕರ ಹಸ್ತಕ್ಷೇಪ ಸರ್ಕಾರದಲ್ಲಿ ಸಲ್ಲ

ರಾಜ್ಯ ಸಚಿವ ಸಂಪುಟ ವಿಸ್ತರಣೆ ಸುದ್ದಿ ಜೋರಾಗಿ ಕೇಳಿಬರುತ್ತಿದ್ದು, ಅವರೇ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾಗಲಿದ್ದಾರೆ ಎಂಬ ಮಾತು ಓಡಾಡುತ್ತಿದೆ. ಅಂದಹಾಗೆ ಇದೇ ಸಂದರ್ಭದಲ್ಲಿ ಮತ್ತೋರ್ವ ಮಾಜಿ ಸಚಿವ ಕೆ.ಎನ್. ರಾಜಣ್ಣ ಕತೆ ಏನು ಎನ್ನುವ ಮಾತು ಉದ್ಭವಿಸಿದೆ.

ವಾಲ್ಮೀಕಿ ನಿಗಮದ ಹಗರಣಕ್ಕೆ ಸಂಬಂಧಿಸಿದಂತೆ ರಾಜೀನಾಮೆ ಸಲ್ಲಿಸಿದ್ದ ಬಿ. ನಾಗೇಂದ್ರ ಮತ್ತೆ ವಾಪಸ್ ಆಗುತ್ತಾರೆ ಎಂದು ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿರುವುದು ಇನ್ನಷ್ಟು ಕುತೂಹಲ ಮೂಡಿಸಿದೆ. ಈ ಸಂದರ್ಭ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತರಲ್ಲಿ ಗುರುತಿಸಿಕೊಂಡಿದ್ದ ಕೆ. ಎನ್. ರಾಜಣ್ಣ ಕತೆ ಏನು ಎನ್ನುವ ಚರ್ಚೆ ಶುರುವಾಗಿದೆ.

ಜನರಿಂದ ಆಯ್ಕೆಯಾಗುವ ಜನಪ್ರತಿನಿಧಿಗಳ ಮೇಲೆ ಯಾರ ಹಿಡಿತ ಇದೆ ಎನ್ನುವ ಅನುಮಾನ ಜನರಲ್ಲಿ ಮೂಡಿದೆ. ರಾಷ್ಟ್ರೀಯ ಪಕ್ಷವಾದ ಹಿನ್ನೆಲೆ ಪಕ್ಷದ ಮೇಲಿನ ಹಿಡಿದ ಹೈಕಮಾಂಡ್‌ಗೆ ಇದೆ. ಅದು ಪ್ರಶ್ನಾತೀತ. ಆದರೆ ಆ ಹಿಡಿತ ಸರ್ಕಾರದ ಹಂತಕ್ಕೂ ಬಂದಿದ್ದು ನಿಜಕ್ಕೂ ಪ್ರಶ್ನೆಗೆ ಅರ್ಹವೇ ಆಗಿದೆ.

ಮತ ಕಳ್ಳತನದ ಬಗ್ಗೆ ಕಾಂಗ್ರೆಸ್ ಸಮಾವೇಶದ ಸಂದರ್ಭದಲ್ಲಿ ತುಮಕೂರಿನಲ್ಲಿ ಮಾತನಾಡಿದ್ದ ಅಂದಿನ ಸಚಿವ ಕೆ ಎನ್ ರಾಜಣ್ಣ ಸಚಿವ ಸ್ಥಾನ ಕಳೆದುಕೊಂಡಿದ್ದರು.

ಈ ನಿರ್ಧಾರ ತಪ್ಪೆನ್ನುವುದು ಸರ್ಕಾರದ ಗಮನಕ್ಕೆ ಇಲ್ಲವೇ? ಹೈಕಮಾಂಡ್ ಇರುವುದು ಪಕ್ಷದ ಹಿಡಿತ ಸಾಧಿಸಲು. ಸರ್ಕಾರ ರಚನೆಯಾಗುವುದು ಜನಬೆಂಬಲದಿಂದ. ರಾಜಣ್ಣರ ಮಾತಿಗೆ ಜನ ಯಾವುದೇ ವಿರೋಧ ವ್ಯಕ್ತಪಡಿಸಿಲ್ಲ. ಸಚಿವರು, ಶಾಸಕರು ಖಂಡಿಸಿಲ್ಲ. ಹೀಗಿರುವಾಗ ಏಕಾಏಕಿ ಹೈಕಮಾಂಡ್ ನಿರ್ಧಾರ ಪಾಲಿಸುವ ದರ್ದು ಸರ್ಕಾರಕ್ಕೆ ಏನಿತ್ತು? ರಾಹುಲ್ ಗಾಂಧಿ ಪಕ್ಷದ ನಾಯಕರು. ಆದರೆ ಸರ್ಕಾರದ ಚಟುವಟಿಕೆಯಲ್ಲಿ ಹಸ್ತಕ್ಷೇಪ ಸರಿಯಲ್ಲ. ರಾಜ್ಯದಲ್ಲಿ ಜನರಿಂದ ಸಿಕ್ಕ ಅಧಿಕಾರವನ್ನು ರಾಹುಲ್ ಗಾಂಧಿ ಬಳಸುವುದು ಸರಿಯಲ್ಲ. ಇಲ್ಲಿಗೆ ವಿಶೇಷ ಸಂಸದೀಯ ವ್ಯವಸ್ಥೆ ಇದೆ. ಇದರ ಮಧ್ಯಪ್ರವೇಶ ಮಾಡುವ ಅಧಿಕಾರ ನೀಡಿದವರು ಯಾರು? ಸಂಪುಟದಲ್ಲಿ ಯಾರು ಇರಬೇಕು, ಬೇಡ ಎನ್ನುವುದು ಸಿಎಂ ಅಧಿಕಾರ. ಯಾರೋ ಹೊರಗಿನವರು ನೀಡಿದ ತೀರ್ಪಿಗೆ ಮುಖ್ಯಮಂತ್ರಿ ತಲೆಬಾಗಿದರೆ ರಾಜ್ಯದ ಜನರ ತೀರ್ಪಿಗೆ ಸಿಕ್ಕ ಬೆಲೆಯೇನು?

ಇದು ಮೊದಲ ಸಾರಿ ಅಲ್ಲ. ಹಿಂದೆ ವೀರೇಂದ್ರ ಪಾಟೀಲರು ಮುಖ್ಯಮಂತ್ರಿ ಆಗಿದ್ದ ಸಂದರ್ಭ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ನಿಂತು ಪದವಿಯಿಂದ ಕೆಳಗಿಳಿಸುವ ಹೇಳಿಕೆ ನೀಡಿದ್ದ ಅಂದಿನ ಪ್ರಧಾನಿ ರಾಜೀವ್ ಗಾಂಧಿ ಮಾಡಿದ ಹಾನಿ ಇಂದಿಗೂ ಜೀವಂತವಾಗಿದೆ. ಲಿಂಗಾಯಿತ ಸಮುದಾಯದವರು ಇಂದಿಗೂ ಕಾಂಗ್ರೆಸ್ ಪಕ್ಷವನ್ನು ಒಪ್ಪದ ಸ್ಥಿತಿ ಇದೆ. ಇದೀಗ ಹಿಂದುಳಿದ ವರ್ಗದ ನಾಯಕನಿಗೆ ಅವಮಾನ ಮಾಡಿರುವ ಸರ್ಕಾರ ಇದನ್ನು ಈಗಲೇ ಸರಿಪಡಿಸಿಕೊಳ್ಳಲು ಕ್ರಮ ಕೈಗೊಳ್ಳುವುದಾ ಅನ್ನುವುದನ್ನು ನೋಡಬೇಕಿದೆ.

# ರಸ್ತೆ ಗುಂಡಿಯೇ ಅಭಿವೃದ್ಧಿಯ ಸಂಕೇತ!

ಭಾರೀ ಮಳೆಯ ನಡುವೆ, ನೊರಜು, ನುಶಿಯಿಂದ ಕಚ್ಚಿಸಿಕೊಳ್ಳುತ್ತ ಪನ್‌ಚಾಯ್ತಿ ಮಾಡಬೇಕಾದ ಸಂದರ್ಭ ಬಂದಿದ್ದರಿಂದ ನಿನ್ನೆ ಸಂಜೆ ಎಲ್ಲ ಸದಸ್ಯರೂ ಯಂಕನಮನೆ ಹೊಡ್ತಲ ಎದುರು ಸೇರುವುದು ಎಂದು ತೀರ್ಮಾನವಾಯಿತು.ನಿಗದಿತ ಸಮಯಕ್ಕೆ ಸರಿಯಾಗಿ ಸದಸ್ಯರೆಲ್ಲರೂ ಬಂದು ಕುಳಿತರು.

ಯಂಕ ಬೆಳಿಗ್ಗೆ ಶಿರಸಿ ಪ್ಯಾಟೆಗೆ ಹೋದವ ಈಗ ಕೆಲ ಹೊತ್ತಿನ ಮುಂಚೆಯಷ್ಟೇ ಮನೆಗೆ ಬಂದಿದ್ದ. ಹಬ್ಬವಾದರೂ ಮಂಗಳವಾರದ ಸಂತೆ ಮಳೆಯ ಕಾರಣ ಸಪ್ಪಗಾಗಿತ್ತು ಎಂದು ಅರುಹಿದ. ಆದರೂ ಬೆಳಿಗ್ಗೆಯಿಂದ ಸಂಜೆಯವರೆಗೆ ಪ್ಯಾಟೆಯಲ್ಲಿ ಏನು ಮಾಡಿದೆ ಎಂದು ಆತನ ಪತ್ನಿ ಕೇಳಿದಾಗ ರೇಗಿಹೋಯಿತು. ರಸ್ತೆ ಪೂರಾ ಹೊಂಡ. ಪ್ಯಾಟೆಗೆ ಹೋಗಲಿಕ್ಕೆ ಒಂದು ತಾಸು, ಬರಲಿಕ್ಕೆ ಒಂದು ತಾಸು ಬೇಕು. ಗ್ಯಾರಂಟಿ ಸರಕಾರದ ಏಳನೇ ಗ್ಯಾರಂಟಿ ಚೆನ್ನಾಗಿ ಅನುಷ್ಠಾನಗೊಂಡಿದೆ ಎಂದ.

ಒಂಟಿ ಹಿಡಿತದ ಸಂಕ ಯಾವತ್ತೂ ಬಿಜೆಪಿ. ಅದರಲ್ಲೂ ಈಗ ಆತ ವಿರೋಧ ಪಕ್ಷದಲ್ಲಿದ್ದಾನೆ. ಕಾಂಗ್ರೆಸ್ ಬೆಂಬಲಿಗ ಪೆದ್ದ ಯಂಕ ಇಷ್ಟು ಹೇಳಿದಮೇಲೆ ಸಂಕ ಸುಮ್ಮನಿದ್ದಾನೆಯೆ? ನೀನು ನೀಲೆಕಣಿ ರಸ್ತೆಯಲ್ಲಿ ಬಂದೆಯಲ್ಲವೆ? ಅದನ್ನು ಮಾತ್ರ ಹೇಳುತ್ತೀಯೆ. ನೀವು




ಪನ್ ಚಾಯ್ತಿ 8

ಅಶ್ವಿನಿ ಸರ್ಕಲ್‌ನಲ್ಲಿ ಬಿದ್ದ ಹೊಂಡದ ಸುದ್ದಿ ಹೇಳುವುದೇ ಇಲ್ಲ ಎಂದ. ನಿರಂತರ ಇಬ್ಬರ ನಡುವೆ ಪಾಟೀಸವಾಲು ನಡೆಯಿತು. ಸಂಕ ರಾಜ್ಯ ಸರಕಾರಕ್ಕೆ ಸಂಬಂಧಿಸಿದ ರಸ್ತೆಗಳ ಹೊಂಡದ ಸುದ್ದಿ ಹೇಳಿದರೆ, ಯಂಕ ಕೇಂದ್ರ ಸರಕಾರಕ್ಕೆ ಸಂಬಂಧಿಸಿದ ಹೆದ್ದಾರಿಗಳ ಸುದ್ದಿ ಹೇಳಿದ. ಇಬ್ಬರ ಪತ್ನಿಯರಿಗೂ ಇವರಿಬ್ಬರ ವಾದ ನೋಡಿ ರೇಸಿಹೋಯಿತು. ಸಂಕನ ಹೆಂಡತಿ ಈ ಗಲಾಟೆಯನ್ನು ತಡೆಯುವುದಕ್ಕಾಗಿ, "ಹೊಂಡವೇ ಅಭಿವೃದ್ಧಿಯ ಸಂಕೇತ" ಎಂಬ ಘೋಷಣೆಯೊಂದಿಗೆ ಅಂತಿಮ ತೀರ್ಪು ಕೊಟ್ಟಳು! ಎಲ್ಲರೂ ಕಣ್ಣರಳಿಸಿಕೊಂಡು ಆಕೆಯತ್ತಲೇ ನೋಡಿದರು. ಈ ಕುರಿತು ವಿವರಣೆ ನೀಡುವಂತೆ ಸಂಕ ಹೆಂಡತಿಗೆ ಸೂಚನೆ ನೀಡಿದ. ಮೊನ್ನೆ ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿ ಉಪಮುಖ್ಯಮಂತ್ರಿ ಡಿಕೆಶಿ ಏನಂದ್ರು? ಈಗಾಗಲೇ ಬೆಂಗಳೂರಲ್ಲಿ ಐದು ಸಾವಿರ ಹೊಂಡ ಮುಚ್ಚಿದ್ದಾಗಿ ಹೇಳಿ, ಇದು ತಮ್ಮ ಸರಕಾರದ ಸಾಧನೆ ಎಂದ್ರು. ಬಿಜೆಪಿ ಅಧಿಕಾರದಲ್ಲಿದ್ದಾಗ ಇಷ್ಟು ಹೊಂಡ ಮುಚ್ಚಿದ್ದರೇ? ಅವರಿಗೆ ಹೊಂಡದ ಕುರಿತು ಮಾತನಾಡುವ ನೈತಿಕತೆ ಇಲ್ಲ ಎಂದರು. ಈಗ ನಾನು ವಿವರಣೆ ಕೊಡುತ್ತೇನೆ. ರಸ್ತೆ ಹೊಂಡ ಮುಚ್ಚುವುದು ಸಾಧನೆ ಎಂದರೆ ಅದು ಅಭಿವೃದ್ಧಿಯ ಸಂಕೇತವಲ್ಲವೆ? ರಸ್ತೆಯಲ್ಲಿ ಹೊಂಡವೇ ಆಗದಿದ್ದರೆ ಹೊಂಡ ಮುಚ್ಚಿ ,ಲೆಕ್ಕ ಕೊಟ್ಟು ಸಾಧನೆ ಹೇಳಿಕೊಳ್ಳಲು ಆಗುತ್ತಿತ್ತೆ? ಈ ವರ್ಷ ಐದು ಸಾವಿರ ಹೊಂಡ ಮುಚ್ಚಿದ್ದು ಸಾಧನೆಯಾದರೆ, ಮುಂದಿನ ವರ್ಷ ಹತ್ತು ಸಾವಿರ ಹೊಂಡ ಮುಚ್ಚಿ ಸಾಧನೆಯನ್ನು ಹೆಮ್ಮೆಯಿಂದ ಹೇಳಿಕೊಳ್ಳಬೇಕು. ಅದು ನಿಜವಾದ ಅಭಿವೃದ್ಧಿ. ಈ ವರ್ಷಕ್ಕಿಂತ ಹೆಚ್ಚು ಹೊಂಡ ಮುಂದಿನವರ್ಷ ಬೀಳದಿದ್ದರೆ ಮುಚ್ಚಿ ಅಭಿವೃದ್ಧಿಯನ್ನು ತೋರಿಸುವುದು ಹೇಗೆ? ಅದಕ್ಕಾಗೇ ನಾನು ಹೇಳಿದ್ದು, ರಸ್ತೆಯ ಹೊಂಡವೇ ಅಭಿವೃದ್ಧಿಯ ಸಂಕೇತ. ಈಗ ಯಂಕ ಶಿರಸಿಯಿಂದ ಊರಿಗೆ ಬರಲು ಒಂದು ತಾಸು ಸಮಯ ಹಿಡಿಯಿತು ಎಂದು ಬೇಸರಿಸಿಕೊಂಡ. ಮುಂದೆ ಹೊಂಡ ಮುಚ್ಚಿದಾಗ ಈತನೇ, ಈಗ ರಸ್ತೆಯನ್ನು ಚೆನ್ನಾಗಿ ಮಾಡಿದ್ದಾರೆ. ಒಂದೇ ಒಂದು ಹೊಂಡವಿಲ್ಲ. ಇದು ನಿಜವಾಗಿ ಸರಕಾರದ ಸಾಧನೆ ಎನ್ನುತ್ತಾನೆ. ಅಷ್ಟರಲ್ಲಿ ಚುನಾವಣೆ ಬರುತ್ತದೆ. ಹೊಂಡ ಮುಚ್ಚಿ ಅಭಿವೃದ್ಧಿ ಮಾಡಿದ ಸರಕಾರದ ಸಾಧನೆಗೆ ಜನ ಮತ್ತೆ ಮತ ಹಾಕಿ ಅಧಿಕಾರಕ್ಕೆ ತರುತ್ತಾರೆ. ಅದಕ್ಕಾಗೇ ಚುನಾವಣೆ ವರ್ಷದಲ್ಲಿ ಎಲ್ಲ ರಸ್ತೆಗೂ ಹೊಸದಾಗಿ ಡಾಂಬರ್ ಹಾಕುತ್ತಾರೆ. ಹೆಂಗಸಾದ ನನಗೇ ಇಷ್ಟು ಅರ್ಥವಾಗುತ್ತದೆ, ದಿನವೂ ಪ್ಯಾಟೆ ತಿರುಗುವ ನಿಮಗೆ ಅರ್ಥವಾಗದಿರುವುದು ಆಶ್ಚರ್ಯ ಎನ್ನುತ್ತ ಎಲ್ಲರ ಮುಖವನ್ನು ದೃಷ್ಟಿಸಿದಳು. ಎಲ್ಲರೂ ಎದ್ದು ಹೊಂಡಕ್ಕೆ ಜೈ, ಸರಕಾರಕ್ಕೆ ಜೈ ಎಂಬ ಘೋಷಣೆಯೊಂದಿಗೆ ಅಲ್ಲಿಂದ ತೆರಳಿದರು.

**ಸಹಿ ಇದೆ**
**ಪನ್‌ಚಾಯ್ತಿ ಅಧ್ಯಕ್ಷರು**
**-ಪ್ರವೀ**

# ನಮ್ಮ ಅಹಂ-ವಾಸ್ತವದ ನಡುವಿನ ಸಂಘರ್ಷಕ್ಕೆ ಕನ್ನಡಿ ವೇದಿಕೆ



✍ ಡಾ. ಆನಂದ ಹೆಗಡೆ ಶೀಗೇಹಳ್ಳಿ

## ಆನಂದಮತಿ

ಕನ್ನಡಿ – ಈ ಪದ ಕೇಳಿದೊಡನೆ ನಮ್ಮ ಕಣ್ಣೆದುರು ಬರುವುದು ನಮ್ಮದೇ ಪ್ರತಿಬಿಂಬ. ಬೆಳಿಗ್ಗೆ ಏಳುತ್ತಿದ್ದಂತೆ, ನಮ್ಮ ಉಡುಗೆ ಹಾಗೂ ತಿಲಕವನ್ನು ಸರಿಪಡಿಸಿಕೊಳ್ಳಲು, ಸಾರ್ವಜನಿಕವಾಗಿ ಹೊರಡುವ ಮೊದಲು ಕೊನೆಯ ನೋಟಕ್ಕಾಗಿ ಇದನ್ನು ಆಶ್ರಯಿಸುತ್ತೇವೆ. ಆದರೆ ಕನ್ನಡಿ ಕೇವಲ ಒಂದು ಪ್ರತಿಫಲನದ ವಸ್ತುವಲ್ಲ. ಅದು ಮಾನವ ಸಮಾಜದ, ವಿಜ್ಞಾನದ, ತತ್ತ್ವಶಾಸ್ತ್ರದ, ಕಲೆಗಳ, ಧರ್ಮಗಳ, ಪುರಾಣಗಳ, ಮತ್ತು ನಮ್ಮ ಮನಸ್ಸಿನ ಗಹನ ಅಧ್ಯಯನದ ಒಂದು ವಿಶಾಲ ವೇದಿಕೆ. ಕನ್ನಡಿಯನ್ನು ನಾವು ಕೇವಲ ನಮ್ಮ ಮುಖ ನೋಡುವ ಸಾಧನವೆಂದು ನೋಡಿದರೆ ಅದು ಒಂದು ಚಿಕ್ಕ ಉಪಯೋಗಕ್ಕೆ ಸೀಮಿತವಾಗುತ್ತದೆ. ಆದರೆ ಕನ್ನಡಿಯನ್ನು ಗಂಭೀರವಾಗಿ ಅರ್ಥಮಾಡಿಕೊಂಡರೆ ಅದು ಮನುಷ್ಯ ಜೀವನದ ಸಮಗ್ರ ತತ್ತ್ವವನ್ನು ಹಿಡಿದಿಟ್ಟಿದೆ ಎಂಬುದನ್ನು ಅರಿಯಬಹುದು.

ಕನ್ನಡಿಯ ಮೂಲಭೂತ ಸ್ವಭಾವವೇ ಪ್ರತಿಬಿಂಬಿಸುವುದು. ಆದರೆ ಅದು ಸತ್ಯವನ್ನು ತೋರಿಸುವುದೋ, ಇಲ್ಲವೇ ಕೇವಲ ಒಂದು ತೋರುವಿಕೆಯನ್ನೋ ತೋರಿಸುವುದೋ ಎಂಬ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ಉದಾಹರಣೆಗೆ, ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬ ವಾಸ್ತವಿಕವಲ್ಲ. ಅದು ಬಲ ಎಡ ಬದಲಾದ ಕಲ್ಪನೆ. ಅಂದರೆ ಕನ್ನಡಿಯು ಯಾವಾಗಲೂ ಪಾರ್ಶ್ವವನ್ನು ಹೊಂದಿರುತ್ತದೆ. ಅಂದರೆ, ನೀವು ಎತ್ತಿರುವ ಬಲಗೈ, ಪ್ರತಿಬಿಂಬದಲ್ಲಿ ಎಡಗೈಯಾಗಿ ಕಾಣಿಸುತ್ತದೆ. ಸತ್ಯವನ್ನು ತೋರಿಸುವಂತೆ ತೋರುತ್ತದೆ, ಆದರೆ ಅದೇ ಸತ್ಯ ಆಗದೆ ಇರಬಹುದು. ಈ ಸಣ್ಣ ವಿಷಯವೇ ಮಾನವ ಜೀವನದ ಒಂದು ಗಾಢ ತತ್ತ್ವವನ್ನು ತಿಳಿಸುತ್ತದೆ – ನಾವು ಜಗತ್ತಿನಲ್ಲಿ ಕಾಣುವುದೆಲ್ಲಾ ನಿಜವಾದ ಸತ್ಯವಲ್ಲ, ಅದು ಒಂದು ಪ್ರತಿಬಿಂಬ ಮಾತ್ರ. ಜ್ಞಾನೋದಯ ಎಂದರೆ ಆ ಪ್ರತಿಬಿಂಬದಾಚೆಯ ಸತ್ಯವನ್ನು ಕಾಣುವ ಶಕ್ತಿ.

ಸಾಂಪ್ರದಾಯಿಕವಾಗಿ, ಕನ್ನಡಿ ಎಂದರೆ ನಮ್ಮ ಬಾಹ್ಯ ಸೌಂದರ್ಯ, ಯೌವನ ಅಥವಾ ವಯಸ್ಸಾಗುವಿಕೆಯ ಪ್ರಕ್ರಿಯೆಯನ್ನು ತೋರಿಸುವ ಒಂದು ನಿಷ್ಪಕ್ಷಪಾತ ಸಾಕ್ಷಿ. ಇದು ನಮ್ಮನ್ನು ಮರುಳು ಮಾಡಲು ಪ್ರಯತ್ನಿಸುವುದಿಲ್ಲ. ಅದು ಕಂಡಿದ್ದನ್ನು ಕಂಡ ಹಾಗೆಯೇ ತೋರಿಸುತ್ತದೆ. ಹಾಗಾಗಿಯೇ, ನಮ್ಮ ಅಹಂ ಮತ್ತು ವಾಸ್ತವದ ನಡುವಿನ ಸಂಘರ್ಷಕ್ಕೆ ಕನ್ನಡಿ ಒಂದು ವೇದಿಕೆ. ಅದರ ಮುಂದೆ ನಿಂತಾಗ, ನಾವು ಸಮಾಜಕ್ಕೆ ತೋರಿಸಲು ಬಯಸುವ ನಟನೆಯ ಮುಖವಾಡವನ್ನು ತೆಗೆದು, ನಿಜವಾದ ನಮ್ಮನ್ನು ಎದುರಿಸಬೇಕಾಗುತ್ತದೆ. ನಿಜವಾಗಿ, ಕನ್ನಡಿ ನಮ್ಮ ದೈಹಿಕ ರೂಪವನ್ನು ತೋರಿಸುವಷ್ಟೇ ಅಲ್ಲ, ಅದು ನಮ್ಮ ಇಚ್ಛೆ, ಆತಂಕ, ಆತ್ಮವಿಶ್ವಾಸ, ಆತ್ಮಸಂಕೋಚ ಎಲ್ಲವನ್ನೂ ಪ್ರತಿಬಿಂಬಿಸುತ್ತದೆ. ಕನ್ನಡಿ ಮೌನವಾಗಿ ನಮ್ಮನ್ನು ದಿಟ್ಟಿಸಿ ನೋಡುತ್ತಿರುತ್ತದೆ, ಮತ್ತು ಆ ಒಂದೇ ಒಂದು ನೋಟದಲ್ಲಿ, ನಮ್ಮ ಯಶಸ್ಸಿನ ಹೆಗ್ಗಳಿಕೆ, ನಮ್ಮ ಸೋಲಿನ ಕಳವಳ, ಮತ್ತು ನಮ್ಮ ಅಹಂನ ಅಸಹಾಯಕತೆ ಎಲ್ಲವೂ ಪ್ರತಿಫಲಿಸುತ್ತವೆ.

ಕನ್ನಡಿಯ ಕಲ್ಪನೆ ಸಾವಿರಾರು ವರ್ಷಗಳ ಹಿಂದೆ ಹುಟ್ಟಿದೆ. ನಮ್ಮ ಪೂರ್ವಜರು ಕೊಳ ಅಥವಾ ಸರೋವರದ ಶಾಂತ ಮೇಲ್ಮೈಯಲ್ಲಿ ತಮ್ಮ ಮುಖವನ್ನು ನೋಡುತ್ತಿದ್ದರು. ಆ ಪ್ರತಿಬಿಂಬವೇ ಮೊದಲ ಕನ್ನಡಿ. ನಂತರದಲ್ಲಿ ತಾಮ್ರ, ಬೆಳ್ಳಿ, ಉಕ್ಕು ಇತ್ಯಾದಿ ಲೋಹಗಳಿಂದ ಮಿನುಗುವ ತಳಹದಿಗಳನ್ನು ತಯಾರಿಸಿ ಕನ್ನಡಿ ರೂಪಿಸಲಾಯಿತು. ವಿಜ್ಞಾನಿಗಳು ಕನ್ನಡಿಯ ತತ್ವವನ್ನು ಉಪಯೋಗಿಸಿ ದೂರದರ್ಶಕ, ಸೂಕ್ಷ್ಮದರ್ಶಕ, ಲೇಸರ್ ತಂತ್ರಜ್ಞಾನ, ವೈದ್ಯಕೀಯ ಶಸ್ತ್ರಚಿಕಿತ್ಸೆ ಇತ್ಯಾದಿಗಳಲ್ಲಿ ಅದ್ಭುತ ಸಾಧನೆ ಮಾಡಿದ್ದಾರೆ. ಅಂದರೆ ಕನ್ನಡಿ ಕೇವಲ ನಮ್ಮ ಮುಖ ತೋರಿಸುವ ಸಾಧನವಲ್ಲ, ಅದು ಜಗತ್ತನ್ನು ದೊಡ್ಡದಾಗಿ ನೋಡಲು, ಅಣುವನ್ನು ಚಿಕ್ಕದಾಗಿ ನೋಡಲು, ಆಕಾಶವನ್ನು ಆಳವಾಗಿ ನೋಡಲು ಸಹಾಯ ಮಾಡಿದೆ.

ಕನ್ನಡಿ ಕೇವಲ ಪ್ರಸ್ತುತ ಕ್ಷಣವನ್ನು ಮಾತ್ರ ತೋರಿಸುವುದು ಸತ್ಯವೇ ಆದರೂ ನಾವು ಕನ್ನಡಿ ಮುಂದೆ ನಿಂತಾಗ, ನಮ್ಮ ದೇಹವನ್ನು ಮಾತ್ರ ನೋಡುವುದಲ್ಲದೆ ನಾವು ನಮ್ಮ ಜೀವನದ ಪಯಣದ ಒಂದು ಕ್ಷಣಿಕ ಅವಲೋಕನ ಮಾಡುತ್ತಿರುತ್ತೇವೆ. ಈ ಕನ್ನಡಿ ನಮ್ಮನ್ನು ಕ್ಷಮೆಯಾಚಿಸಲು ಅಥವಾ ಹೊಸದನ್ನು ಪ್ರಾರಂಭಿಸಲು ಪ್ರೇರೇಪಿಸುವ ಒಂದು ವೇದಿಕೆಯೂ ಹೌದು. ಇನ್ನೊಂದು ವಿಶೇಷತೆ ಎಂದರೆ ಕನ್ನಡಿ ಒಂದು ಶೂನ್ಯವನ್ನು ಕೂಡ ತೋರಿಸುತ್ತದೆ. ಕನ್ನಡಿಯ ಮುಂದೆ ಖಾಲಿ ನಿಲ್ಲಿಸಿದರೆ ಅದು ಖಾಲಿಯನ್ನೇ ಹಿಂತಿರುಗಿಸುತ್ತದೆ. ಅಂದರೆ ಕನ್ನಡಿ ನಮ್ಮನ್ನು ನೆನಪಿಸುತ್ತದೆ – ನಾವು ನಮ್ಮೊಳಗೆ ಏನನ್ನು ಇಟ್ಟಿದ್ದೇವೋ ಅದನ್ನೇ ಜಗತ್ತು ನಮಗೆ ಹಿಂತಿರುಗಿಸುತ್ತದೆ.

ಕಲೆಗಳಲ್ಲಿ ಕನ್ನಡಿಯ ಉಪಯೋಗ ಅದ್ಭುತ. ಯಕ್ಷಗಾನ, ನೃತ್ಯ, ನಾಟಕಗಳಲ್ಲಿ ಕಲಾವಿದರು ತಮ್ಮ ಅಭ್ಯಾಸದ ಸಮಯದಲ್ಲಿ ಕನ್ನಡಿಯನ್ನು ಬಳಸುತ್ತಾರೆ. ಏಕೆಂದರೆ ಕನ್ನಡಿಯೇ ನೇರ ವಿಮರ್ಶಕ. ಅದು ಸುಳ್ಳು ಹೇಳುವುದಿಲ್ಲ. ಕಲಾವಿದನು ತನ್ನ ದೇಹಭಾಷೆ, ಮುಖಭಾವ, ಕಣ್ಣು, ನೃತ್ಯದ ನವಿರಾದ ಚಲನೆಯನ್ನು ಕನ್ನಡಿಯಲ್ಲಿ ಪರಿಶೀಲಿಸುತ್ತಾನೆ. ಅಂದರೆ ಕನ್ನಡಿಯೇ "ಕಲಾವಿದನ ಗುರು". ಇದೇ ತತ್ತ್ವ ಸಾಹಿತ್ಯದಲ್ಲಿಯೂ ಅನ್ವಯಿಸುತ್ತದೆ – ಒಳ್ಳೆಯ ಕೃತಿ ಕನ್ನಡಿಯಂತೆ ಸಮಾಜವನ್ನು ತೋರಿಸುತ್ತದೆ.

ಇನ್ನೊಂದು ವಿಶಿಷ್ಟ ಅಂಶ – ಒಂದೊಮ್ಮೆ ಕನ್ನಡಿ ಒಡೆದು ಹೋಗಿದ್ದರೆ, ಅದರಲ್ಲಿ ಕಾಣುವ ಪ್ರತಿಬಿಂಬ ಕೂಡ ತುಂಡಾಗಿಯೇ ಕಾಣುತ್ತದೆ. ಇದು ಮನುಷ್ಯನ ಜೀವನಕ್ಕೂ ಅನ್ವಯಿಸುತ್ತದೆ. ಮನಸ್ಸು ಒಡೆದಾಗ ವ್ಯಕ್ತಿಯ ಚಿತ್ರವೂ ಅವ್ಯವಸ್ಥೆಯಾಗಿ ತೋರುತ್ತದೆ. ಮಹಾಭಾರತದಲ್ಲಿ ಒಂದು ಪ್ರಸಂಗ – ಕರ್ಣನ ಜೀವನ. ಅವನು ಯಾವಾಗಲೂ ತನ್ನನ್ನು ಸೂತಪುತ್ರನೆಂದು ಕನ್ನಡಿಯಲ್ಲಿ ಕಂಡುಕೊಂಡ. ಅವನು ತನ್ನ ವೀರತ್ವವನ್ನು ಮರೆತು, ಸಮಾಜ ನೀಡಿದ ಮುದ್ರೆಯನ್ನು ಕನ್ನಡಿಯಂತೆ ಪ್ರತಿಬಿಂಬಿಸಿಕೊಂಡ. ಆದರೆ ನಿಜವಾಗಿ ಅವನ ರಕ್ತ ರಾಜವಂಶದದ್ದು. ಇಲ್ಲಿ ಪಾಠವೆಂದರೆ – ನಾವು ನಮ್ಮನ್ನು ಯಾವ ಕನ್ನಡಿಯಲ್ಲಿ ನೋಡುತ್ತೇವೆ ಎಂಬುದೇ ನಮ್ಮ ಜೀವನವನ್ನು ನಿರ್ಧರಿಸುತ್ತದೆ. ಕರ್ಣನ ದುರಂತವೆಂದರೆ ಅವನು ತಪ್ಪು ಕನ್ನಡಿಯಲ್ಲಿ ತನ್ನನ್ನು ಅಳೆಯುತ್ತಿದ್ದ.

ಇಂದಿನ ಸಾಮಾಜಿಕ ಮಾಧ್ಯಮದ ಜಗತ್ತಿನಲ್ಲಿ ಪ್ರತಿಯೊಬ್ಬರೂ ತಮ್ಮ ಜೀವನವನ್ನು ಕನ್ನಡಿಯಂತೆ ಇತರರಿಗೆ ತೋರಿಸುತ್ತಿದ್ದಾರೆ. ಫೇಸ್ಬುಕ್, ಇನ್‌ಸ್ಟಾಗ್ರಾಮ್ ಇವು ಆಧುನಿಕ ಕನ್ನಡಿಗಳು. ಆದರೆ ಅವುಗಳಲ್ಲಿ ತೋರಿಸುವುದು ಅಲಂಕೃತ, ಫಿಲ್ಟರ್ ಮಾಡಿದ ಪ್ರತಿಬಿಂಬ. ಅಲ್ಲಿ ನಿಜವಾದ ಬದುಕಿನ ಬದಲು, ಮೇಕಪ್ ಮಾಡಿರುವ ಜೀವನವನ್ನು ತೋರಿಸುವುದು. ಇದು ನಮ್ಮ ಕಾಲದ ದೊಡ್ಡ ಸವಾಲು – ನಾವು ನಿಜವಾದ ಕನ್ನಡಿಯನ್ನು ಕಾಣುತ್ತೇವೆಯೋ ಅಥವಾ ಸುಳ್ಳು ಕನ್ನಡಿಗಳ ಮೋಸದಲ್ಲಿ ಬೀಳುತ್ತೇವೆಯೋ?

ಸಮಾಜವೇ ಒಂದು ಕನ್ನಡಿ. ನಾವು ಅಲ್ಲಿ ನಗುತ್ತಾ ನೋಡಿದರೆ, ನಮಗೆ ನಗುವ ಪ್ರತಿಬಿಂಬ ಸಿಗುತ್ತದೆ. ನಮ್ಮ ಕ್ರಿಯೆಗಳು, ಮಾತುಗಳು ಮತ್ತು ವರ್ತನೆಗಳು ಪ್ರಪಂಚದಲ್ಲಿ ನಾವು ಅನುಭವಿಸುವ ಅನುಭವಗಳನ್ನು ನಿರ್ಧರಿಸುತ್ತವೆ. ನಾವು ಜಗತ್ತಿಗೆ ನೀಡಿದ್ದೇ ನಮ್ಮತ್ತ ಪ್ರತಿಫಲಿಸುತ್ತದೆ. ನಾವು ಪ್ರತಿ ದಿನ ಕನ್ನಡಿಯ ಮುಂದೆ ನಿಂತು, ನಮ್ಮ ಮುಖವಾಡವನ್ನು ಸರಿಪಡಿಸಿಕೊಳ್ಳುತ್ತೇವೆ. ಆದರೆ, ನಿಜವಾದ ಸವಾಲು ಇರುವುದು ನಾವು ಆ ಕನ್ನಡಿಯಿಂದ ಹೊರಬಂದ ನಂತರ. ಕನ್ನಡಿ ಆಚೆಗೂ, ನಮ್ಮ ಕ್ರಿಯೆಗಳು, ನಮ್ಮ ಮಾತುಗಳು ಮತ್ತು ನಮ್ಮ ನಿರ್ಧಾರಗಳು ಕನ್ನಡಿಯಷ್ಟೇ ಶುಭ್ರವಾಗಿರಲಿ.

# ಅಪ್ಪನ ಆನಂದೋ ಬ್ರಹ್ಮವೂ.. ಮಗನ ಡೋಪಮೈನ್ ಲೂಪೂ..!



✍ ನಾಗರಾಜ ವೈದ್ಯ

## ಇಸ್ರೂಪ

ನೀವೇನೇ ಅನ್ನಿ, ನಾವೆಲ್ಲರೂ ಆನಂದವನ್ನು ಹುಡುಕುವುದಕ್ಕೆಂದೇ ಭೂಮಿಗೆ ಬಿದ್ದವರು! ಅನುಮಾನವಿದ್ದರೆ ಮಾನವನ ಇತಿಹಾಸವನ್ನು ಓದಿ, ತತ್ತ್ವಶಾಸ್ತ್ರದ ಅಭ್ಯಾಸ ಮಾಡಿ, ಸಮಾಧಾನವಾಗದಿದ್ದರೆ ವಿಜ್ಞಾನವನ್ನೂ ಅರೆದು ಕುಡಿಯಿರಿ. ಎಲ್ಲವೂ ಹೇಳುವುದು ಒಂದೇ; ನಾವು ಅಂದರೆ ಮನುಷ್ಯರು ಆನಂದವನ್ನೇ ಅರಸುವವರು.

ಆನಂದ ಎಂದರೇನು ಎಂಬ ಪ್ರಶ್ನೆಗೆ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆಯೇ ಉತ್ತರ ಸಿಗುತ್ತದೆ. ವ್ಯಕ್ತಿಯಿಂದ ವ್ಯಕ್ತಿಗೆ ಇದು ಬೇರೆಯದೇ ಆಗಿರುತ್ತದೆ. ಇದನ್ನು ಉಪನಿಷತ್ತುಗಳು "ಆನಂದೋ ಬ್ರಹ್ಮ" ಎಂದರೆ, ಆಧುನಿಕ ನರವಿಜ್ಞಾನ "ಡೋಪಮೈನ್ ಲೂಪ್" ಎಂದು ವೈಜ್ಞಾನಿಕವಾಗಿ ಕರೆದಿದೆ. ಅಷ್ಟಕ್ಕೂ ಹೆಸರಲ್ಲೇನಿದೆ ಅನ್ನುವಿರಾ? ಅಲ್ಲೇ ಇದೆ ಮಜಕೂರು! ಮೇಲ್ನೋಟಕ್ಕೆ ಇವೆರಡೂ ಒಂದೇ ರೀತಿಯಾಗಿ ಕಂಡರೂ ಸಾಕಷ್ಟು ವ್ಯಾತ್ಯಾಸಗಳಿವೆ. ಈ ವ್ಯತ್ಯಾಸ, ಸಾಮ್ಯತೆಗಳನ್ನು ಗಮನಿಸಿದರೆ, ಅಪ್ಪನ ಆನಂದೋ ಬ್ರಹ್ಮವೂ.. ಮಗನ ಡೋಪಮೈನ್ ಲೂಪೂ.. ಎಂದು ಆರಾಮಾಗಿ ಹಿಸೆ ಪಂಚಾಯ್ತಿ ಮಾಡಿ ಮುಗಿಸಬಹುದು!

ನಾವು ಬದುಕುತ್ತಿರುವ ಕಾಲ - ನಾವು ಮತ್ತು ನಮ್ಮ ಸುತ್ತಲಿನವರು ಇವತ್ತು ಡೋಪಮೈನ್ ಹಿಂದೇ ಓಡುತ್ತಿದ್ದೇವೆ. ನಮ್ಮಿಡೀ ಬದುಕಿಗೆ ಬೇಕಾದ್ದು ಆನಂದೋ ಬ್ರಹ್ಮವೇ ಎಂಬುದು ಗೊತ್ತಿದ್ದರೂ, ನಮ್ಮೀ ರನ್ನಿಂಗ್ ರೇಸಿಗೆ ಯಾವುದೇ ಅಡೆತಡೆಯಿಲ್ಲ. ಇದ್ದರೂ ಲೆಕ್ಕಿಸುವುದಿಲ್ಲ. ಅಲ್ಲ, ಲೆಕ್ಕಿಸಲು ಡೋಪಮೈನ್ ಲೂಪ್ ಬಿಡುವುದಿಲ್ಲ! ಒಳಗಿನ ಪ್ರಜ್ಞೆಯೊಂದು ಆಗಾಗ ಕೂಗುತ್ತಿರುತ್ತದೆ; ನಾವೆಲ್ಲಿಗೆ ತಲುಪಲು ಹೊರಟಿದ್ದೇವೆ?

ಉಪನಿಷತ್ತಿನ ಆನಂದೋ ಬ್ರಹ್ಮ ತತ್ತ್ವವು ಆಧ್ಯಾತ್ಮಿಕ ಪರಮಾವಸ್ಥೆಯನ್ನು ಹೇಳುತ್ತದೆ. ಇದು ಕ್ಷಣಿಕ ಸುಖವಲ್ಲ, ಬಾಹ್ಯ ಪ್ರಚೋದನೆಗಳಿಂದ ಬರುವ ಉಲ್ಲಾಸವಲ್ಲ. ಇದು ಅಂತರಂಗದಲ್ಲಿರುವ ಶಾಶ್ವತ ಶಾಂತಿ ಮತ್ತು ತೃಪ್ತಿ. ಧ್ಯಾನ, ಯೋಗ, ಭಕ್ತಿ, ನಿಸ್ವಾರ್ಥ ಕರ್ಮ ಜಗತ್ತಿನಲ್ಲಿ ಒಳ್ಳೆಯದು ಅಂತ ಯಾವುದೆಲ್ಲ ಇದೆಯೋ.. ಅದೆಲ್ಲವನ್ನೂ ಅನುಸರಿಸಿದರೆ ಮಾತ್ರ ತಲುಪಬಹುದಾದ ಸ್ಥಿತಿ. ನಾವಿವತ್ತು ನೋಡುತ್ತಿರುವ ಜಗತ್ತಿನಲ್ಲಿ ಇವುಗಳೆಲ್ಲ ಫ್ರೇಮ್ ಹಾಕಿಟ್ಟ ಅಜ್ಜ - ಅಜ್ಜಿಯ ಚಿತ್ರದಂತೆ. ಎಂದಾದರೂ ಅವರು ಫೋಟೋದಿಂದ ಜೀವ ತಳೆದು ಬರುತ್ತಾರೆಯೇ? ಆದರೂ ಇಂದು ವಿಶ್ವದಾದ್ಯಂತ ಧ್ಯಾನ ಮತ್ತು ಮೈಂಡ್‌ಫುಲ್‌ನೆಸ್ ಹೆಸರಲ್ಲಿ ಸೆಮಿನಾರು, ಶಿಬಿರ, ಇತ್ಯಾದಿಗಳೆಲ್ಲ ಜೋರಾಗೇ ನಡೆಯುತ್ತಿದೆ.. ದುಡ್ಡಿದ್ದವರು ಕೊಟ್ಟು, ಅವುಗಳಲ್ಲಿ ಭಾಗವಹಿಸುತ್ತಿದ್ದಾರೆ. ಭಾಗವಹಿಸಲಿ.

ಇನ್ನೊಂದು ಮಜಾ ಇದೆ. ಬಿಡದೇ ಸುರಿಯುವ ಮಳೆಯನ್ನು ಮಿಲಿಮೀಟರಿನಲ್ಲಿ ಅಳೆದಂತೆ, ಜಗತ್ತಿನ ಮನುಷ್ಯರೆಲ್ಲ ಅಂತಾರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಖುಷಿಯನ್ನು "ಹ್ಯಾಪಿನೆಸ್ ಇಂಡೆಕ್ಸ್" ಹೆಸರಿನಲ್ಲಿ ಅಳೆಯುತ್ತಾರೆ. ಒಂದೊಂದು ದೇಶದ ಮರ್ಜಿ ಒಂದೊಂದಿರುತ್ತದೆ, ಆದರೆ ಅವೆಲ್ಲವುಗಳನ್ನೂ ಲೆಕ್ಕಾಚಾರ ಹಾಕಿ ಈ ವರದಿ ಸಿದ್ಧಪಡಿಸುತ್ತಾರೆ. ಜಗತ್ತಿನ ನೂರಾ ನಲವತ್ತೇಳು ದೇಶಗಳ ಪೈಕಿ ನಮ್ಮ ದೇಶ 118 ನೇ ಸ್ಥಾನದಲ್ಲಿದೆ. ಅಚ್ಚರಿ ಎಂದರೆ ಈ ವರದಿಯಲ್ಲೂ ಒಟ್ಟಾರೆ ಹಣ ಗಳಿಕೆ, ಉಳಿಕೆ, ಶ್ರೀಮಂತಿಕೆಯೊಂದೇ ಅಲ್ಲ. ಆಂತರಿಕ ಸಮತೋಲನವೇ ನಿಜವಾದ ಸಂತೋಷ ಎಂಬ ಅರಿವು ವಿಶ್ವಮಟ್ಟದಲ್ಲಿ ರೂಪುಗೊಂಡಿರುವುದನ್ನು ನಾವು ಕಾಣಬಹುದು. ಯಾವ ಎಜ್ ಗ್ರೂಫ್‌ನವರನ್ನು ಅಳೆದು ಈ ವರದಿ ತಯಾರಿಸಿರಬಹುದು?

ಯಾಕೆಂದರೆ, ಈ ವರದಿಗೆ ವಿರುದ್ಧವಾಗಿ, ವಿಜ್ಞಾನ ಹೇಳುವ ಡೋಪಮೈನ್ ಲೂಪ್ ಮನುಷ್ಯನ ಮೆದುಳಿನ ಬಯಕೆ-ಕ್ರಿಯೆ-ಪ್ರತಿಫಲ ಚಕ್ರವನ್ನು ವಿವರಿಸುತ್ತದೆ. ಡೋಪಮೈನ್ ಎಂಬ ನರಪ್ರೇಷಕ ಒಂದು ಕ್ರಿಯೆಯಿಂದ ನಿರೀಕ್ಷಿತ ಫಲ ಸಿಕ್ಕಾಗ ಬಿಡುಗಡೆಯಾಗುತ್ತದೆ. ಫೋನ್‌ನಲ್ಲಿ ನೋಟಿಫಿಕೇಶನ್ ಬರುವುದು, ಆನ್‌ಲೈನ್ ಶಾಪಿಂಗ್‌ನಲ್ಲಿ ಡಿಸ್ಕೌಂಟ್ ದೊರಕುವುದು, ಗೇಮಿಂಗ್‌ನಲ್ಲಿ ಅನಿರೀಕ್ಷಿತವಾಗಿ ಬಹುಮಾನ ಸಿಗುವುದು, ಒಟ್ಟಿನಲ್ಲಿ ಬಯಸಿದ್ದೆಲ್ಲ ಕೈಗೆ ಸಿಗುವುದು, ಕೈಗೆ ಸಿಕ್ಕಿದ್ದಕ್ಕಿಂತ ಇನ್ನೂ ಹೆಚ್ಚಿನದು ಬೇಕೆಂದುಮನಸು ಹಾತೊರೆಯುತ್ತ ಸ್ಕ್ರೀನ್ ಮೇಲೆ ಬೆರಳುಗಳ ಮ್ಯಾರಾಥಾನ್ ಮಾಡುವುದು – ಇವೆಲ್ಲವೂ ಡೋಪಮೈನ್ ಲೂಪ್‌ನ ನೈಜ ಉದಾಹರಣೆಗಳು. ಅಂದರೆ ಈ ಲೂಪ್ ತಾತ್ಕಾಲಿಕ ಉಲ್ಲಾಸವನ್ನು ಕೊಡುತ್ತದೆ. ಆದರೆ ಅದೇ ಸಮಯದಲ್ಲಿ ಹೊಸ ಬಯಕೆಯ ಬೀಜವನ್ನೂ ಬಿತ್ತುತ್ತದೆ. ಹೀಗಾಗಿ ನಿರಂತರವಾಗಿ ಬಯಕೆ–ತೃಪ್ತಿ–ಅತೃಪ್ತಿ–ಹೊಸ ಬಯಕೆ ಎಂಬ ಚಕ್ರ ತಿರುಗುತ್ತಿರುತ್ತದೆ.

ಈ ಎರಡು ಪರಿಕಲ್ಪನೆಗಳ ನಡುವಿನ ವ್ಯತ್ಯಾಸ ಸ್ಪಷ್ಟ. ಆನಂದೋ ಬ್ರಹ್ಮ ಶಾಶ್ವತ, ಆಂತರಿಕ ಮತ್ತು ಸ್ಥಿರ. ಅದು ಯಾವುದೇ ಬಾಹ್ಯ ಅಂಶಗಳ ಮೇಲೆ ಅವಲಂಬಿತವಲ್ಲ. ಡೋಪಮೈನ್ ಲೂಪ್ ಕ್ಷಣಿಕ, ಬಾಹ್ಯ ಮತ್ತು ಅಸ್ಥಿರ. ಒಂದರಲ್ಲಿ ಮುಕ್ತಿ, ಮತ್ತೊಂದರಲ್ಲಿ ಬಂಧನ. ಆದರೆ ಎರಡೂ ಮಾನವನ ಮೂಲಭೂತ ತವಕವನ್ನು ವಿವರಿಸುತ್ತವೆ. ನಮ್ಮ ಹಾಗೂ ನಮ್ಮ ಮುಂದಿನ ಜನರೇಷನ್ನುಗಳು ಇವತ್ತು ಯಾವುದರ ಮರ್ಜಿಯಲ್ಲಿ ಬದುಕುತ್ತಿದೆಯೆಂದು ಹೊಸದಾಗಿ ಹೇಳಬೇಕಿಲ್ಲ ತಾನೇ?

ನಾವು ಬದುಕುತ್ತಿರುವ ಕಾಲ ಅತ್ಯಂತ ನಾಜೂಕಿನದ್ದು. ಸಂಪೂರ್ಣ ಧ್ಯಾನ ಸಾಧ್ಯವೇ ಇಲ್ಲ ಅನ್ನುವಂಥ ಸ್ಥಿತಿ. ತಪೋ ಭಂಗಕ್ಕೆ ರಂಬೆ, ಊರ್ವಶಿ ಮೇನಕೆಯರೇ ಬರಬೇಕೆಂದಿಲ್ಲ. ಮೊಬೈಲ್ ಇದ್ದರೆ ಸಾಕು! ಸ್ಕ್ರೀನ್ ಸ್ಕ್ರೋಲ್ ಮಾಡುತ್ತ, ದಿನ ಕಳೆಯುತ್ತಿದ್ದೇವೆ. ಎಷ್ಟು ನೋಡಿದರೂ ಮುಗಿಯದ ದಾಹ.. ಮತ್ತಷ್ಟು ಉದ್ದೀಪನೆಯಾಗುತ್ತಲೇ ಇರುತ್ತದೆ. ಇದಕ್ಕೆಲ್ಲ ಕಾರಣ ನಮ್ಮ ಮೆದುಳಿನ ಡೋಪಮೈನ್ ಲೂಪೇ ಆಗಿದೆ. ಇದನ್ನೇ ದುರ್ಬಳಕೆ ಮಾಡಿಕೊಂಡು, "ಲೂಟ್ ಬಾಕ್ಸ್", "ಫ್ಲ್ಯಾಶ್ ಸೇಲ್" ಇತ್ಯಾದಿಗಳ ರಂಗ್ಬಿರಂಗೀ ಹೆಸರಲ್ಲಿ ಆನ್ಲೈನ್ ಮಾರುಕಟ್ಟೆಗಳು ಕೋಟ್ಯಂತರ ಲಾಭ ಗಳಿಸುತ್ತಿವೆ. ಡೋಪಮೈನ್ ಲೂಪ್ ಎಂಬ ಎರೆಹುಳ ನಮ್ಮನ್ನು ಸುಲಭವಾಗಿ ಗಾಳಕ್ಕೆ ಬೀಳಿಸುತ್ತಿರುವುದು ನಮ್ಮರಿವಿಗೆ ಬರುವುದೇ ಇಲ್ಲ! ಈ ಬಗ್ಗೆ ಸಾಕಷ್ಟು ಸಂಶೋಧನೆಗಳೂ ನಡೆದಿವೆ. ನಮಗೆ ಆಫೀಸಿನಲ್ಲಿ ಕೂತು ಕೆಲಸ ಮಾಡುವುದಕ್ಕಿಂತ, ಅಥವಾ ಬಾಸ್ ವಹಿಸಿದ ಟಾಸ್ಕ್ ಮುಗಿಸಿದಾಗ ಆಗುವ ಸಂತೋಷಕ್ಕಿಂತ, ನೋಟಿಫಿಕೇಷನ್ ಬರಲಿ, ಬಿಡಲಿ ಮೊಬೈಲ್ ಅನ್ಲಾಕ್ ಮಾಡಿ ನೋಡುವುದರಲ್ಲೇ ಆಸಕ್ತಿ. ಯಾರೋ ಒಬ್ಬಿಬ್ಬರನ್ನು ನೋಡಿ ಹೇಳುತ್ತಿರುವುದಲ್ಲ. ಸ್ವತಃ ನಾನೂ ಕೂಡ ಇದರಿಂದ ಹೊರತಾಗಿಲ್ಲ. ಈ ಬಗ್ಗೆ ಸಂಶೋಧನೆಗಳೇ ನಡೆದು, ಅದರಲ್ಲೂ ದೃಢಪಟ್ಟಿವೆ ಕೂಡಾ. ಇದರಿಂದ ಒಳಿತಿಗಿಂತ ಕೆಡುಕೇ ಜಾಸ್ತಿ ಆಗುತ್ತಿದೆ ಎಂಬುದನ್ನೂ ನಾವು ಅಲ್ಲಗಳೆಯುವಂತಿಲ್ಲ. ಕೆಲಸಕ್ಕಿಂತ ಫೋನ್ ಮೇಲೇ ಆಸಕ್ತಿ ಜಾಸ್ತಿ, ಮಕ್ಕಳಿಗೆ ಪಾಠಕ್ಕಿಂತ ಆನ್ಲೈನ್ ಗೇಮ್‌ಗಳ ಮೇಲೆ ಹೆಚ್ಚು ಒಲವು. ಇದು ಕುಟುಂಬ ಜೀವನವನ್ನೂ ಬಿಟ್ಟಿಲ್ಲ. ಅತಿಯಾದ ಸ್ಕ್ರೀನ್ ಟೈಮ್‌ಗಳು ಸಂಭಾಷಣೆಯ ಸಮಯವನ್ನು ಕಸಿದುಕೊಳ್ಳುತ್ತಿವೆ. ಇವೆಲ್ಲವೂ ಡೋಪಮೈನ್ ಲೂಪ್‌ನ ಬಂಧನದ ಉದಾಹರಣೆಗಳು.

ಆದರೆ ಇದರಿಂದ ಪರಿಹಾರವಿಲ್ಲವೇ? ಇದೆ. ಮೊದಲನೆಯದಾಗಿ ಜಾಗೃತಿ – ಯಾವ ಕ್ಷಣದಲ್ಲಿ ನಾವು ಲೂಪ್‌ನಲ್ಲಿ ಸಿಲುಕಿದ್ದೇವೆ ಎಂಬುದನ್ನು ಅರಿಯುವುದು ಮುಖ್ಯ. ನೋಟಿಫಿಕೇಶನ್‌ಗಳನ್ನು ನಿಯಂತ್ರಿಸುವುದು, ಸ್ಕ್ರೀನ್ ಟೈಮ್ ಮಿತಿಗೊಳಿಸುವುದು, ಡಿಜಿಟಲ್ ಡಿಟಾಕ್ಸ್ ದಿನಗಳನ್ನು ಅಳವಡಿಸಿಕೊಳ್ಳುವುದು – ಇವು ಲೂಪ್‌ನ ಪ್ರಭಾವವನ್ನು ಕಡಿಮೆ ಮಾಡಬಹುದು. ಪರ್ಯಾಯವಾಗಿ, ವ್ಯಾಯಾಮ, ಕಲೆ, ಓದು, ಸ್ನೇಹಿತರೊಂದಿಗೆ ಕಾಲಕಳೆಯುವುದು – ಇವು ಸಹ ಡೋಪಮೈನ್ ಬಿಡುಗಡೆ ಮಾಡುತ್ತವೆ. ಆದರೆ ಆರೋಗ್ಯಕರ ಮತ್ತು ಸೃಜನಾತ್ಮಕ ರೀತಿಯಲ್ಲಿ. ಜೊತೆಗೆ, ಧ್ಯಾನ, ಯೋಗ, ಪ್ರಾರ್ಥನೆ – ಇವು ಆನಂದೋ ಬ್ರಹ್ಮದತ್ತ ಕರೆದೊಯ್ಯುವ ದಾರಿಗಳು.

ಅಷ್ಟಕ್ಕೂ ಡೋಪಮೈನ್ ಲೂಪ್ ಸ್ವತಃ ಕೆಟ್ಟದ್ದೇನೂ ಅಲ್ಲ. ಅದು ನಮ್ಮ ಜೈವಿಕ ವ್ಯವಸ್ಥೆಯ ನೈಸರ್ಗಿಕ ಭಾಗ. ಸಮಸ್ಯೆ ಅದು ನಮ್ಮನ್ನು ನಿಯಂತ್ರಿಸುವಾಗ ಹುಟ್ಟುತ್ತದೆ. ಆನಂದೋ ಬ್ರಹ್ಮ ತತ್ತ್ವವು ಈ ಬಂಧನವನ್ನು ಮೀರಿಸುವ ದಾರಿ ತೋರಿಸುತ್ತದೆ. ಅದು ನಮಗೆ ತಾತ್ಕಾಲಿಕ ಉಲ್ಲಾಸಕ್ಕಿಂತಲೂ ಆಳವಾದ, ಶಾಶ್ವತ ತೃಪ್ತಿಯತ್ತ ಕರೆದೊಯ್ಯುತ್ತದೆ. ನಾವು ಯಾವ ಆನಂದವನ್ನು ಆರಿಸುತ್ತೇವೆ? ಎಂಬ ಪ್ರಶ್ನೆ ನಮ್ಮೊಳಗೆ ಹುಟ್ಟಿದರೆ, ನಾವು ಅಪ್ಪನ ದಾರಿಯಲ್ಲಿ ಹೋಗಬೇಕೋ, ಮಗನ ದಾರಿಯಲ್ಲಿ ಹೋಗಬೇಕೋ ಎಂದು ನಿರ್ಧರಿಸಲು ಸಹಾಯ ಮಾಡುತ್ತದೆ. ಆದರೆ, ತಂತ್ರಜ್ಞಾನವೇ ನಮ್ಮನ್ನು ಆಳುತ್ತಿರುವ ಈ ದಿನಗಳಲ್ಲಿ ಈ ಪ್ರಶ್ನೆ ಕೇವಲ ವೈಯಕ್ತಿಕವಾಗಿರದೆ, ಸಮೂಹದ ಮಟ್ಟದಲ್ಲಿಯೂ ಪ್ರಸ್ತುತ. ಏಕೆಂದರೆ ನಾವು ಹುಡುಕುವ ಆನಂದವೇ ನಮ್ಮ ಜೀವನದ ದಿಕ್ಕನ್ನು, ನಮ್ಮ ಸಮಾಜದ ಭವಿಷ್ಯವನ್ನು ನಿರ್ಧರಿಸುತ್ತದೆ. ಒಟ್ಟಿನಲ್ಲಿ, ಗಾಯ ಕಮ್ಮಿಯಾದರೆ ಹಾಯೆನಿಸುತ್ತದೆ. ಕೆರೆದುಕೊಂಡರೆ ಸುಖ ಸಿಗುತ್ತದೆ. ಆಯ್ಕೆ ನಮ್ಮ ನಮ್ಮದೇ!

# ಬೀದಿ ನಾಯಿ ಕಾಟ ತಪ್ಪುವುದು ಯಾವಾಗ?!

ಉತ್ತರ ಕನ್ನಡ ಜಿಲ್ಲೆಯ ವಿವಿಧ ಪಟ್ಟಣ ಹಾಗೂ ಗ್ರಾಮ ಪ್ರದೇಶಗಳಲ್ಲಿ ಕಳೆದ ಕೆಲವು ವರ್ಷಗಳಿಂದ ಬೀದಿ ನಾಯಿಗಳ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಂಡಿದೆ. ಪಟ್ಟಣದ ಬಸ್ ನಿಲ್ದಾಣ, ಮಾರುಕಟ್ಟೆ, ಶಾಲಾ-ಕಾಲೇಜುಗಳ ಸುತ್ತಮುತ್ತ ಬೀದಿ ನಾಯಿಗಳ ಗುಂಪು ತಿರುಗಾಡುತ್ತಿರುವುದು ಸಾಮಾನ್ಯ ದೃಶ್ಯವಾಗಿದೆ. ಅನೇಕ ಬಾರಿ ಮಕ್ಕಳನ್ನು, ಹಿರಿಯರನ್ನು ಹಾಗೂ ವಾಹನ ಸವಾರರನ್ನು ಹಿಂಬಾಲಿಸಿ ಕಚ್ಚುವ ಘಟನೆಗಳು ಸಂಭವಿಸುತ್ತಿವೆ. ಇದರ ಪರಿಣಾಮವಾಗಿ ಸಾಮಾನ್ಯ ನಾಗರಿಕರಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ.

ಬೀದಿ ನಾಯಿಗಳ ಕಾಟದಿಂದಾಗಿ ಶಾಲೆಗೆ ಹೋಗುವ ಮಕ್ಕಳು ತೊಂದರೆ ಅನುಭವಿಸುತ್ತಿದ್ದಾರೆ. ಬೆಳಗಿನ ಜಾವ ವ್ಯಾಯಾಮಕ್ಕಾಗಿ ಹೊರಡುವವರು, ರಾತ್ರಿ ಹೊತ್ತು ಕೆಲಸ ಮುಗಿಸಿ ಮನೆಗೆ ಹಿಂತಿರುಗುವವರು ಹೆಚ್ಚಿನ ಆತಂಕಕ್ಕೊಳಗಾಗುತ್ತಿದ್ದಾರೆ. ಕೆಲವೊಮ್ಮೆ ವಾಹನ ಸವಾರರು ನಾಯಿಗಳ ದಾಳಿಯಿಂದ ತಪ್ಪಿಸಿಕೊಳ್ಳುವ ವೇಳೆ ಅಪಘಾತಕ್ಕೀಡಾಗುತ್ತಿರುವ ಘಟನೆಗಳೂ ವರದಿಯಾಗಿವೆ. ಇದರಿಂದ ಗಾಯಗಳು, ಆಸ್ಪತ್ರೆ ವೆಚ್ಚಗಳು ಮತ್ತು ಕೆಲವು ಸಂದರ್ಭಗಳಲ್ಲಿ ಜೀವಾಪಾಯವೂ ಉಂಟಾಗಿದೆ.

ಈ ಸಮಸ್ಯೆ ಉಂಟಾಗಲು ಹಲವು ಕಾರಣಗಳಿವೆ. ಕಸದ ಸರಿಯಾದ ವಿಲೇವಾರಿ ಇಲ್ಲದಿರುವುದು, ರಸ್ತೆಗಳ ಮೇಲೆ ಆಹಾರ ಅವಶೇಷಗಳನ್ನು ಬಿಸಾಡುವುದು ನಾಯಿಗಳನ್ನು ಆಕರ್ಷಿಸುತ್ತದೆ. ಇದಲ್ಲದೆ, ಪಟ್ಟಣ ಪಂಚಾಯಿತಿ ಮತ್ತು ನಗರಸಭೆಗಳ ನಿರ್ಲಕ್ಷ್ಯದಿಂದ ನಾಯಿಗಳ ಸಂಖ್ಯೆಯ ನಿಯಂತ್ರಣ ಸಾಧ್ಯವಾಗುತ್ತಿಲ್ಲ. ಹಲವೆಡೆ ನಾಯಿ ನಿಷ್ಕ್ರಿಯಕರಣ (sterilization) ಕಾರ್ಯಕ್ರಮಗಳು ಕೇವಲ ಕಾಗದದಲ್ಲೇ ಸೀಮಿತವಾಗಿವೆ.

ಜನತೆ ಇದರಿಂದ ಹೊರಬರಲು ಸ್ಥಳೀಯ ಸಂಸ್ಥೆಗಳು ತಕ್ಷಣವೇ ಸಮಗ್ರ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯ. ಬೀದಿ ನಾಯಿಗಳನ್ನು ಹಿಡಿದು ನಿಷ್ಕ್ರಿಯಗೊಳಿಸುವ ಕಾರ್ಯ ಚುರುಕುಗೊಳಿಸಬೇಕು. ಅಗತ್ಯವಿದ್ದಲ್ಲಿ ತಾತ್ಕಾಲಿಕ ಆಶ್ರಯ ಕೇಂದ್ರಗಳನ್ನು ನಿರ್ಮಿಸಿ ನಾಯಿಗಳಿಗೆ ಸುರಕ್ಷಿತ ವಾತಾವರಣ ಒದಗಿಸಬಹುದು. ಜೊತೆಗೆ ಸಾರ್ವಜನಿಕರೂ ಸಹ ತಮ್ಮ ಹೊಣೆಗಾರಿಕೆಯನ್ನು ಅರಿತು, ಆಹಾರ ಅವಶಿಷ್ಟಗಳನ್ನು ರಸ್ತೆಯ ಮೇಲೆ ಬಿಸಾಡದಂತೆ ಜಾಗ್ರತೆ ವಹಿಸಬೇಕು.

ಇನ್ನೊಂದು ಪ್ರಮುಖ ಅಂಶವೆಂದರೆ ಜನರಲ್ಲಿ ಜಾಗೃತಿ ಮೂಡಿಸುವುದು. ನಾಯಿಗಳು ಕಚ್ಚಿದ ಸಂದರ್ಭದಲ್ಲೇ ತಕ್ಷಣವೇ ವೈದ್ಯರನ್ನು ಸಂಪರ್ಕಿಸುವುದು, ರೇಬೀಸ್ ಲಸಿಕೆ ಪಡೆಯುವುದು ಜೀವ ರಕ್ಷಣೆಗಾಗಿ ಅನಿವಾರ್ಯ. ಶಾಲಾ-ಕಾಲೇಜುಗಳಲ್ಲಿ ಮಕ್ಕಳಿಗೆ ಈ ಕುರಿತು ಮಾಹಿತಿ ನೀಡುವುದರಿಂದ ಅಪಾಯ ತಡೆಯಬಹುದು.

ಒಟ್ಟಿನಲ್ಲಿ, ಬೀದಿ ನಾಯಿ ಕಾಟವನ್ನು ತಡೆಯುವುದು ಕೇವಲ ಆಡಳಿತದ ಹೊಣೆಗಾರಿಕೆಯಾಗಿರದೆ, ಸಮಾಜದ ಪ್ರತಿಯೊಬ್ಬರ ಸಹಕಾರ ಅಗತ್ಯ. ಜನಸಾಮಾನ್ಯರ ಭಯ ದೂರವಾಗಿ, ಪಟ್ಟಣಗಳಲ್ಲಿ ಶಾಂತಿಯುತ ವಾತಾವರಣ ನಿರ್ಮಾಣವಾಗಲೆಂದು ಸಂಬಂಧಿಸಿದ ಇಲಾಖೆಗಳು ತುರ್ತಾಗಿ ಕ್ರಮ ಕೈಗೊಳ್ಳುವುದು ಕಾಲಹರಣ ಮಾಡದ ಅವಶ್ಯಕತೆಯಾಗಿದೆ.

ಜನಮುಡಿ
ನಮ್ಮ ವಿಳಾಸ
ತತ್ತ್ವನಿಷ್ಠ ದಿನ ಪತ್ರಿಕೆ
ಹೊಟೆಲ್ ಮಧುವನ ಹಿಂಭಾಗ, ಯಲ್ಲಾಪುರ ರಸ್ತೆ,
ಶಿರಸಿ-581 401, ದೂರವಾಣಿ: 9481559555
email: tatvanishtadaily@gmail.com

ಈ ದಿನದಲ್ಲಿ ಜನಸಂಚಾರ ಹೆಚ್ಚಿರುವುದರಿಂದ ಭಯ ಕಡಿಮೆ ಇದ್ದರೂ, ರಾತ್ರಿ ಹೊತ್ತು ರಸ್ತೆಗಳಲ್ಲಿ ನಿಶ್ಯಬ್ದ ವಾತಾವರಣ ಇರುವಾಗ ಬೀದಿ ನಾಯಿಗಳ ಗುಂಪುಗಳು ಅಲೆದಾಡುತ್ತವೆ. ಆ ಸಂದರ್ಭದಲ್ಲಿ ಮನೆಗೆ ತಡವಾಗಿ ಮರಳುವವರು, ಕಾರ್ಖಾನೆ-ಆಫೀಸು ಮುಗಿಸಿ ಬರುವವರು, ತುರ್ತು ಸೇವೆಗಳಿಗಾಗಿ ಹೋಗುವವರು, ಕಾಲೇಜು-ಹಾಸ್ಟೆಲ್ ವಿದ್ಯಾರ್ಥಿಗಳು ಹಾಗೂ ರೈತರು ಹೆಚ್ಚಾಗಿ ಬಲಿಯಾಗುವ ಸಂಭವ ಹೆಚ್ಚಿರುತ್ತದೆ.

ವಿಶೇಷವಾಗಿ ಬೈಕ್‌ನಲ್ಲಿ ಓಡಿಸುವವರಿಗೆ ನಾಯಿಗಳು ಓಡಿಬಂದು ಹಿಂಬಾಲಿಸುವುದರಿಂದ ಅಪಘಾತಗಳು ಸಂಭವಿಸುತ್ತವೆ. ಕೆಲವೊಮ್ಮೆ ಗುಂಪಾಗಿ ದಾಳಿ ಮಾಡುವ ಪರಿಸ್ಥಿತಿಯೂ ಎದುರಾಗುತ್ತದೆ. ಇದರಿಂದ ಸಾಮಾನ್ಯರಿಗೆ ಭಯ, ಮಕ್ಕಳಿಗೆ ಹಾಗೂ ವೃದ್ಧರಿಗೆ ತೀವ್ರ ಅಪಾಯ.

ಸಾರ್ವಜನಿಕರ ಜೀವ-ಆಸ್ತಿಯ ರಕ್ಷಣೆಗೆ, ಬೀದಿ ನಾಯಿ ನಿಯಂತ್ರಣಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳುವುದು ಅವಶ್ಯಕವಾಗಿದೆ. ಇಲ್ಲವಾದರೆ ರಾತ್ರಿ ಸಂಚಾರವು ಅಪಾಯಕರವಾಗಿಯೇ ಉಳಿಯುತ್ತದೆ.

**■ ಮಾಯಾ ವೈ. ಹೆಗಡೆ**

# ಜಿಲ್ಲಾ ಕ್ರೀಡಾಕೂಟದಲ್ಲಿ ಬಿಜಿವಿಎಸ್ ಕಾಲೇಜು ಸಾಧನೆ

● **ತತ್ವನಿಷ್ಠ, ಜೋಯಿಡಾ:** ಅಂಕೋಲದ ಹಿಮಾಲಯ ಪದವಿ ಪೂರ್ವ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ಜಿಲ್ಲಾ ಮಟ್ಟದ ಪ.ಪೂ. ಕಾಲೇಜುಗಳ ಕ್ರೀಡಾಕೂಟದಲ್ಲಿ ಬಿಜಿವಿಎಸ್ ಪ.ಪೂ. ಕಾಲೇಜು ರಾಮನಗರದ ಕ್ರೀಡಾಪಟುಗಳು ವಿವಿಧ ವಿಭಾಗಗಳಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ.

ಗುಂಪು ಆಟಗಳಲ್ಲಿ ಟೆನ್ನಿಕ್ವಾಯ್ಡ್ ಸ್ಪರ್ಧೆಯಲ್ಲಿ ಬಾಲಕರ ತಂಡ — ದಕ್ಷ ಗೋಸಾವಿ, ಪ್ರತೀಕ ದೇಸಾಯಿ, ಪ್ರವೇಶ ಹರಿಜನ, ಆಯಾನ್ ಪಾಷ ಹಾಗೂ ವಿರಾಜ್ — ಪ್ರಥಮ ಸ್ಥಾನ ಗಳಿಸಿದೆ. ಅದೇ ರೀತಿ ಬಾಲಕಿಯರ ಟೆನ್ನಿಕ್ವಾಯ್ಡ್ ತಂಡ — ಪ್ರತೀಕ್ಷಾ ಪಾಟೀಲ್, ರಾಣಿ ಕುಂಬಾರ, ಯೋಹಿತಾ, ಮಿಥಾಲಿ ಹಾಗೂ ಮಧುರಾ — ಸಹ ಪ್ರಥಮ ಸ್ಥಾನ ಪಡೆದುಕೊಂಡಿದೆ. ಈ ಎರಡೂ ತಂಡಗಳು ರಾಜ್ಯ ಮಟ್ಟದ



ಟೆನ್ನಿಕ್ವಾಯ್ಡ್ ಕ್ರೀಡಾಕೂಟಕ್ಕೆ ಆಯ್ಕೆಯಾಗಿವೆ.

ಇದೇ ಸಂದರ್ಭದಲ್ಲಿ ಹಳಿಯಾಳ ಕ್ರೀಡಾ ವಸತಿ ನಿಲಯದ ಕುಸ್ತಿ ಪಟುಗಳು ಒಟ್ಟು 7 ಬಂಗಾರದ ಪದಕಗಳನ್ನು ಪಡೆದು ಕೀರ್ತಿ ಗಳಿಸಿದ್ದಾರೆ. ಬಾಲಕರ ವಿಭಾಗದಲ್ಲಿ ಫ್ರೀ ಸ್ಟೈಲ್‌ನಲ್ಲಿ ಮನೋಜ ಹೊಸಮನಿ (61 ಕೆ.ಜಿ), ಅಮೃತ್ ದುರ್ಗಣ್ಣವರ್ (65 ಕೆ.ಜಿ), ಆಯಾನ್ ಬಿ. ಕಕ್ಕೇರಿ (79 ಕೆ.ಜಿ) ಹಾಗೂ ಗ್ರೀಕೋ ರೋಮನ್‌ನಲ್ಲಿ ಅಬುಬಕ್ಕರ್ ಎಸ್. ನದಾಪ್ (60 ಕೆ.ಜಿ) ಪ್ರಥಮ ಸ್ಥಾನ ಗಳಿಸಿದ್ದಾರೆ. ಬಾಲಕಿಯರ ವಿಭಾಗದಲ್ಲಿ ಸವಿತಾ ಸಿದ್ದಿ (57 ಕೆ.ಜಿ), ಮನಿಷಾ ಸಿದ್ದಿ (72 ಕೆ.ಜಿ), ಖುಷಿ ಚಂದುಕರ್ (76 ಕೆ.ಜಿ) ತಲಾ ಬಂಗಾರದ ಪದಕ ಪಡೆದುಕೊಂಡಿದ್ದಾರೆ.

ಈ ಮೂಲಕ ಒಟ್ಟು ಏಳು ಬಂಗಾರದ ಪದಕಗಳನ್ನು ಜಯಿಸಿದ ಕುಸ್ತಿ ಪಟುಗಳು ರಾಜ್ಯ ಮಟ್ಟದ ಕುಸ್ತಿ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

ಇವರ ಸಾಧನೆಗೆ ಬಾಪೂಜಿ ಗ್ರಾಮೀಣ ವಿಕಾಸ ಸಮಿತಿ ಕಾರವಾರದ ಅಧ್ಯಕ್ಷೆ ವನಿತಾ ಪ್ರಭಾಕರ ರಾಣೆ, ಉಪಾಧ್ಯಕ್ಷ ಉಲ್ಲಾಸ ನಾಯ್ಕ, ಕಾರ್ಯದರ್ಶಿ ಮಂಜುನಾಥ ಪವಾರ್, ಜಂಟಿ ಕಾರ್ಯದರ್ಶಿ ಕಿಶೋರ ರಾಣೆ, ಸದಸ್ಯ ಗಜೇಂದ್ರ ಗಾಂದಲೆ, ಕಾಲೇಜಿನ ಪ್ರಾಂಶುಪಾಲ ಪ್ರೇಮಾನಂದ ಎಸ್. ಪರಬ, ದೈಹಿಕ ಶಿಕ್ಷಣ ಉಪನ್ಯಾಸಕ ಸಂಜಯ ಜಿ. ಗೌಡ ಹಾಗೂ ಎಲ್ಲಾ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.



**ಶಿರಸಿ: ತಾಲೂಕಿನ ಸೋದೆ ವಾದಿರಾಜ ಮಠದಲ್ಲಿ ನವರಾತ್ರಿ, ದುರ್ಗಾಷ್ಟಮಿಯ ಪರ್ವಕಾಲದಲ್ಲಿ ಚಂಡಿಕಾ ಹೋಮ ನಡೆಯಿತು..**

## ಸಾಮಾಜಿಕ , ಶೈಕ್ಷಣಿಕ ಸಮೀಕ್ಷೆ : ಪರಿಶೀಲನೆ

● **ತತ್ವನಿಷ್ಠ, ಕಾರವಾರ:** ಜಿಲ್ಲೆಯಲ್ಲಿ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಅಂಗವಾಗಿ ಜಿಲ್ಲೆಯಲ್ಲಿ ಮೊಬೈಲ್ ನೆಟ್‌ವರ್ಕ್ ಸಮಸ್ಯೆ ಇರುವ ಪ್ರದೇಶದಲ್ಲಿನ ಸಾರ್ವಜನಿಕರಿಗೆ, ಸಮೀಪದ ನೆಟ್‌ವರ್ಕ್ ಇರುವ ಪ್ರದೇಶದಲ್ಲಿ ಸಮೀಕ್ಷೆಯಲ್ಲಿ ಭಾಗವಹಿಸಲು ವಿಶೇಷ ಶಿಬಿರಗಳನ್ನು ಆಯೋಜಿಸಿದ್ದು , ಮಂಗಳವಾರ ದೇವಳಮಕ್ಕಿ ಗ್ರಾಮ ಪಂಚಾಯತ್ ನಲ್ಲಿ ಆಯೋಜಿಸಿದ್ದ ಶಿಬಿರಕ್ಕೆ ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯ ಭೇಟಿ ನೀಡಿ, ಸಮೀಕ್ಷಾ ಕಾರ್ಯದ ಪ್ರಗತಿಯನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಷ್ ಶಶಿ, ತರಬೇತಿ ನಿರತ ಐ.ಎ.ಎಸ್ ಅಧಿಕಾರಿ ಝೂಫಿಶನ್ ಹಕ್, ತಾ.ಪಂ. ಕಾರ್ಯ ನಿರ್ವಹಣಾಧಿಕಾರಿ ವೀರನಗೌಡ ಏಗನಗೌಡರ, ಹಾಗೂ ಸಮೀಕ್ಷೆ ಸಿಬ್ಬಂದಿ ಹಾಜರಿದ್ದರು.

## ವರದಾ ಚೌಡೇಶ್ವರಿ ದೇವಸ್ಥಾನದ ವಾರ್ಷಿಕೋತ್ಸವ



● **ತತ್ವನಿಷ್ಠ, ಬನವಾಸಿ:** ಇಲ್ಲಿಯ ಶ್ರೀ ವರದಾ ಚೌಡೇಶ್ವರಿ ದೇವಸ್ಥಾನದ ವಾರ್ಷಿಕೋತ್ಸವವು ಮಂಗಳವಾರ ಸಂಭ್ರಮದಿಂದ ನಡೆಯಿತು. ಮುಂಜಾನೆ ಚೌಡೇಶ್ವರಿ ಅಮ್ಮನವರ ವಿಗ್ರಹಕ್ಕೆ ವಿಶೇಷ ಅಲಂಕಾರಗೈದು, ವಿಶೇಷಪೂಜಾ ಕಾರ್ಯವನ್ನು ನಡೆಸಲಾಯಿತು. ಮಹಾ ಮಂಗಳಾರತಿಯ ಬಳಿಕ ತೀರ್ಥ ಪ್ರಸಾದ ವಿತರಿಸಲಾಯಿತು. ನೂರಾರು ಭಕ್ತರು ಆಗಮಿಸಿ ಹೂ, ಹಣ್ಣು ಕಾಯಿ ಸಮರ್ಪಿಸಿ ಪೂಜೆ ಸಲ್ಲಿಸಿದರು. ಮಧ್ಯಾಹ್ನ ಭಕ್ತರಿಗೆ ಅನ್ನ ಸಂತರ್ಪಣೆ ನಡೆಯಿತು. ಬಈ ಸಂದರ್ಭದಲ್ಲಿ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಗಜಾನನ ಗೌಡ, ಗ್ರಾಪಂ ಉಪಾಧ್ಯಕ್ಷ ಸಿದ್ದವಿರೇಶ ನರೆಗಲ್, ದೇವಸ್ಥಾನ ಸಮಿತಿಯ ಶಿವರಾಜ್ ಆಚಾರ್ಯ, ಗಣಪತಿ ನಾಯ್ಕ, ರಾಮು, ಪರಶುರಾಮ ಜೋಗಿ, ಪಾಪಣ್ಣ , ನಾಗರಾಜ ವಾಲ್ಮೀಕಿ, ಮಂಜಣ್ಣ , ಶಿವಣ್ಣ , ಇಕೋ ಮಂಜು, ಸುಧೀರ ನಾಯರ್, ಶ್ರೀಧರ ಆರೇರ, ರಮೇಶ ಪಟೇಲ್ ಮತ್ತಿತರರು ಇದ್ದರು.

# ಜೀವನದಲ್ಲಿ ಶ್ರೇಷ್ಠತೆ ಬೆಳೆಸಿಕೊಳ್ಳಿ

## ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಡಾ. ಶಿವಾನಂದ ಮಾತು

● **ತತ್ವನಿಷ್ಠ, ಯಲ್ಲಾಪುರ:** ಎಲ್ಲೆಡೆಯಿಂದ ಉತ್ತಮ ಗುಣಗಳನ್ನು ಸ್ವೀಕರಿಸಿ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು. ಜೀವನದಲ್ಲಿ ಶ್ರೇಷ್ಠತೆಯನ್ನು ಬೆಳೆಸಿಕೊಳ್ಳಬೇಕು ಎಂದು ಕರ್ನಾಟಕ ವಿಶ್ವ ವಿದ್ಯಾಲಯದ ಸಿಂಡಿಕೇಟ್ ಸದಸ್ಯ ಡಾ. ಶಿವಾನಂದ ನಾಯಕ ಹೇಳಿದರು.

ಅವರು ಪಟ್ಟಣದ ವಿಶ್ವದರ್ಶನ ಶಿಕ್ಷಣ ಸಂಸ್ಥೆಯಲ್ಲಿ ವಿಶ್ವದರ್ಶನ ಶಿಕ್ಷಣ ಮಹಾವಿದ್ಯಾಲಯದ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಆತ್ಮಬಲ ಮತ್ತು ಉತ್ತಮ ಕನಸುಗಳಿಂದ ಯಶಸ್ಸು ಗಳಿಸಲು ಸಾಧ್ಯ. ಸಿಕ್ಕ ಅವಕಾಶ ಮತ್ತು ಸಮಯವನ್ನು ಸರಿಯಾಗಿ ಸದುಪಯೋಗಪಡಿಸಿಕೊಂಡರೆ ಶಾಶ್ವತವಾದ ಕೀರ್ತಿ ಗಳಿಸಿಕೊಳ್ಳಲು ಸಾಧ್ಯ ಎಂದರು.

ವಿಶ್ವದರ್ಶನ ಶಿಕ್ಷಣ ಸಮೂಹದ ಅಧ್ಯಕ್ಷ ಹರಿಪ್ರಕಾಶ ಕೋಣೆಮನೆ ಮಾತನಾಡಿ, ಸರ್ಕಾರಿ ಶಿಕ್ಷಕ ವೃತ್ತಿ ನಿಭಾಯಿಸುವುದು ಕಠಿಣ ಸವಾಲಾಗಿದೆ. ಶಿಕ್ಷಣ ಸಮಾಜದ ಬಹುಮುಖ್ಯವಾದ ಅಂಗ ಎಂಬ ಚಿಂತನೆಯಿಂದ ಸರ್ಕಾರ ದೂರವಾಗಿದೆ. ಪಠ್ಯದಿಂದ ವಿದ್ಯಾರ್ಥಿಗಳ ಭವಿಷ್ಯ ನಿರ್ಧಾರವಾಗುತ್ತದೆ



ಎಂಬುದನ್ನು ಮರೆತು, ಪಠ್ಯ ಸರ್ಕಾರದ ಚಿಂತನೆಗೆ ಬಲಿಯಾಗಿದೆ. ಶಿಕ್ಷಣ ವ್ಯಕ್ತಿಯ ನಿರ್ಮಾಣ ಮಾಡುವ ಗುರಿಯಿಂದ ದೂರವಾಗಿದೆ. ಸರಿಯಾದ ಶಿಕ್ಷಣ ನೀಡುವ ಶಿಕ್ಷಕನಿಗೆ ಎಲ್ಲೆಡೆ ಅವಕಾಶವಿದೆ ಇದೆ. ಅರ್ಹತೆಯನ್ನು ವ್ಯವಸ್ಥಿತವಾಗಿ ಒರೆಗೆ ಹಚ್ಚಿ ಭವಿಷ್ಯದ ಪೀಳಿಗೆಯ ತಯಾರು ಮಾಡುವ ಜವಾಬ್ದಾರಿ ಶಿಕ್ಷಕರ ಮೇಲಿದೆ. ಭಾಷೆಯ ಮೇಲೆ ಹಿಡಿತವಿರಬೇಕು ಹೆಚ್ಚು ಹೆಚ್ಚು ಭಾಷೆಗಳನ್ನು ತಿಳಿಯಬೇಕು ಎಂದರು.

ಶಿಕ್ಷಣ ಮಹಾವಿದ್ಯಾಲಯದಲ್ಲಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಪ್ರಶಸ್ತಿ ವಿತರಿಸಲಾಯಿತು. ಸೌಜನ್ಯ ಸಂಗಡಿಗರು ಪ್ರಾರ್ಥಿಸಿದರು. ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಎಸ್. ಎಲ್. ಭಟ್ಟ ಸ್ವಾಗತಿಸಿದರು. ಉಪನ್ಯಾಸಕ ಬಿ.ಎನ್ ಭಟ್ಟ ಶಿಕ್ಷಣ ಮಹಾವಿದ್ಯಾಲಯದ ವಾರ್ಷಿಕ ವರದಿ ವಾಚಿಸಿದರು. ಉಪನ್ಯಾಸಕಿ ವೀಣಾ ಭಟ್ಟ ನಿರ್ವಹಿಸಿದರು.

# ಸಹಿ ಅಭಿಯಾನಕ್ಕೆ ಶಾಸಕ ಭೀಮಣ್ಣ ಚಾಲನೆ

● **ತತ್ವನಿಷ್ಠ, ಶಿರಸಿ:** ಎಐಸಿಸಿ ನಿರ್ದೇಶನದ ಮೇರೆಗೆ ರಾಜ್ಯದ್ಯಂತ ನಡೆಯುತ್ತಿರುವ ವೋಟ್ ಚೋರ್ ಗದ್ದಿ ಚೋಡ್ ಸಹಿ ಸಂಗ್ರಹ ಅಭಿಯಾನಕ್ಕೆ ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಾಯಿ ಗಾಂವಕರ ಅಧ್ಯಕ್ಷತೆಯಲ್ಲಿ ಚಾಲನೆ ನೀಡಲಾಯಿತು. ಆ ಮೂಲಕ ಉತ್ತರಕನ್ನಡ ಜಿಲ್ಲೆಯ ಎಲ್ಲ ಬ್ಲಾಕ್ಗಳಲ್ಲಿ, ಬೂತ್ಗಳಲ್ಲಿ ಅಭಿಯಾನ ನಡೆಸಿ ವೋಟ್ ಚೋರಿ ಬಗ್ಗೆ ಮಾಹಿತಿ ನೀಡಲು ತಿಳಿಸಲಾಯಿತು.

ಶಾಸಕ ಭೀಮಣ್ಣ ನಾಯ್ಕ , ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಾಯಿ ಗಾಂವಕರ ಹಾಗೂ ಇನ್ನಿತರ ಜಿಲ್ಲಾ, ಬ್ಲಾಕ್ ಮುಖಂಡರುಗಳು ಸಹಿ ನೀಡುವ ಮೂಲಕ ಅಭಿಯಾನಕ್ಕೆ ಅಧಿಕೃತವಾಗಿ ಚಾಲನೆ ನೀಡಿದರು.




ಸಭೆಯಲ್ಲಿ ಸಾಯಿ ಗಾಂವಕರ ಮಾತನಾಡಿ, ಫೆಬ್ರವರಿ ತಿಂಗಳಲ್ಲಿ ಜಿಲ್ಲೆಯ ಇಬ್ಬರು ಕಾರ್ಯಕರ್ತರಿಗೆ ನಿಗಮ ಮಂಡಳಿ ದೊರೆಯಲಿದೆ. ಜಿಲ್ಲೆಯ ಅತಿಕ್ರಮಣದಾರರು ಯಾವುದೇ ಕಾರಣಕ್ಕೂ ಭಯ ಪಡುವ ಅಗತ್ಯವಿಲ್ಲ. ಒಕ್ಕಲೆಬ್ಬಿಸುವ ಪ್ರಸ್ತಾಪವೂ ಸರ್ಕಾರದ ಮುಂದಿಲ್ಲ. ಒಂದು ವೇಳೆ ಅಂತಹ ವಿಷಯಗಳು ಪ್ರಸ್ತಾಪವಾದಲ್ಲಿ ಜಿಲ್ಲೆಯ ಕಾಂಗ್ರೆಸ್ ಶಾಸಕರ ನೇತೃತ್ವದಲ್ಲಿ ಮುಖ್ಯಮಂತ್ರಿಗಳ ಬಳಿ ನಿಯೋಗ ತೆರಳಿ ಅತಿಕ್ರಮಣದಾರರ ಪರವಾಗಿ ನಿಲ್ಲುತ್ತೇವೆ ಎಂದರು.

ಮಾಜಿ ಶಾಸಕ ವಿ.ಎಸ್.ಪಾಟೀಲ್, ಗ್ಯಾರೆಂಟಿ ಯೋಜನೆ ಪ್ರಾಧಿಕಾರದ ಅಧ್ಯಕ್ಷ ಸತೀಶ ನಾಯ್ಕ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಹೆಗಡೆ ಹೊಸಬಾಳೆ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸುಜಾತಾ ಗಾವಂಕರ, ಜಿಪಂ ಮಾಜಿ ಸದಸ್ಯ ಬಸವರಾಜ ದೊಡ್ಮನಿ, ಸೆಲ್ ಅಧ್ಯಕ್ಷರು, ಬ್ಲಾಕ್ ಅಧ್ಯಕ್ಷರು, ಮುಖಂಡರು ಮತ್ತು ಕಾರ್ಯಕರ್ತರು ಇದ್ದರು.

# ಸ್ವರ್ಣವಲ್ಲೀಯಲ್ಲಿ ಸಂಭ್ರಮದ ಶರನ್ನವರಾತ್ರಿ ಉತ್ಸವ

● **ತತ್ವನಿಷ್ಠ, ಶಿರಸಿ:** ತಾಲೂಕಿನ ಸ್ವರ್ಣವಲ್ಲೀಯಲ್ಲಿ ಶರನ್ನವರಾತ್ರಿ ಉತ್ಸವದ ಅಂಗವಾಗಿ ಶ್ರೀ ಗಂಗಾಧರೇದ್ರ ಸರಸ್ವತೀ ಸ್ವಾಮೀಜಿ ಬ್ರಾಹ್ಮೀಮುಹೂರ್ತದಲ್ಲಿ ಮತ್ತು ಶ್ರೀ ಆನಂದಬೋಧೇದ್ರ ಸರಸ್ವತೀ ಸ್ವಾಮೀಜಿ ಸಾಯಂಕಾಲ ಶ್ರೀಚಕ್ರಾರ್ಚನೆಯನ್ನು ಹಾಗೂ ಶ್ರೀದೇವಿಯ ಮತ್ತು ಶಾರದಾ ಪೂಜೆಗೈದರು. ಗಣಪತಿ ಪೂಜೆ, ಪಂಚಾಮೃತ ಅಭಿಷೇಕ, ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ದೇವಿ ಭಾಗವತ, ಅಧ್ಯಾತ್ಮ ರಾಮಾಯಣ, ಪುರಾಣ, ಶತರುದ್ರ, ಬ್ರಹ್ಮಾಸ್ತ್ರ ಜಪ, ಚಂಡಿ ಪಾರಾಯಣ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು ವೈದಿಕರಿಂದ ನೆರವೇರಿದವು. ಕುದ್ರಿಗೆ, ಅಡಕಾರ, ಮಾವಿನಹೊಳೆ, ನಗರ-ಬಸ್ತಿಕೇರಿ, ಹೊಸಪಟ್ಟಣ, ಕಳಸಿನಮೂಟೆ, ಕುಚಿನಾಡು ರಾಮಕ್ಷತ್ರಿಯ ಶಿಷ್ಯರು ಹಾಗೂ ವೈಯಕ್ತಿಕ ಸೇವಾಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಶ್ರೀ ದೇವಿಯ ಸನ್ನಿಧಿಯಲ್ಲಿ ಸೇವೆಯನ್ನು ಸಲ್ಲಿಸಿ, ಶ್ರೀ



ಶ್ರೀಗಳವರಿಂದ ತೀರ್ಥ, ಆಶೀರ್ವಾದ ಮಂತ್ರಾಕ್ಷತೆಯನ್ನು ಪಡೆದರು.

ಸಾಯಂಕಾಲ ನಡೆದ ಶರನ್ನವರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶಿರಸಿ ಇನ್ನರ್ ವೀಲ್ ಕ್ಲಬ್ ಅವರಿಂದ ಭಜನೆ, ತನುಶ್ರೀ ಗಣಪತಿ ಹೆಗಡೆ ಬೆಕ್ಮನೆ ಅವರಿಂದ ಭಕ್ತಿ ಸಂಗೀತ ಕಾರ್ಯಕ್ರಮ ನೆರವೇರಿತು. ಅಜಯ ಹೆಗಡೆ ವರ್ಗಾಸರ ಮತ್ತು ನಿರಂಜನ ಭಟ್ಟ ಉಂಚಳ್ಳಿ ತಬಲಾದಲ್ಲಿ ಸಹಕರಿಸಿದರು. ಸ್ವರ್ಣವಲ್ಲೀಯ ನಾಟ್ಯಕಲಾ ತಂಡದವರಿಂದ ಭರತನಾಟ್ಯ ಕಾರ್ಯಕ್ರಮ ನಡೆಯಿತು. ಕಲಾವಿದರಿಗೆ ಪ್ರಮಾಣಪತ್ರ, ಸ್ಮರಣಿಕೆ ಮತ್ತು ಸುವರ್ಣಮಂತ್ರಾಕ್ಷತೆಯನ್ನು ನೀಡಲಾಯಿತು. ಆರ್.ಎನ್.ಭಟ್ ಸುಗಾವಿ ಕಾರ್ಯಕ್ರಮ ನಿರ್ವಹಿಸಿದರು.

# ವಾಣಿಜ್ಯ ಕಾಲೇಜಿನಲ್ಲಿ ಗರ್ಭಾ ನೃತ್ಯ



● **ತತ್ವನಿಷ್ಠ, ಶಿರಸಿ:** ನಗರದ ಎಂಇಎಸ್ ವಾಣಿಜ್ಯ ಮಹಾವಿದ್ಯಾಲಯದಲ್ಲಿ ನವರಾತ್ರಿಯ ಪ್ರಯುಕ್ತ ಶಾರದಾ ಪೂಜೆಯನ್ನು ವಿಜೃಂಭಣೆಯಿಂದ ನೆರವೇರಿಸಲಾಯಿತು.

ಮಹಾ ವಿದ್ಯಾಲಯದ ಉಪನ್ಯಾಸಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿ, ದೇವಿಯ ಭಾವಚಿತ್ರಕ್ಕೆ ಭಕ್ತಿ ಭಾವದಿಂದ ಪುಷ್ಪಾರ್ಚನೆ ಮಾಡಿದರು. ಪೂಜೆ ನಂತರ ಎಲ್ಲರಿಗೂ ಪ್ರಸಾದ ವಿತರಣೆ ಮಾಡಲಾಯಿತು.

ವಿದ್ಯಾರ್ಥಿಗಳಿಂದ ಭರತನಾಟ್ಯ, ಭಕ್ತಿಗೀತೆಗಳು ಹಾಗೂ ನೃತ್ಯ ಪ್ರದರ್ಶನಗಳು ನಡೆದವು. ಮಧ್ಯಾಹ್ನ ವಿದ್ಯಾರ್ಥಿಗಳಿಂದ ವಿಶೇಷವಾಗಿ ಗರ್ಭಾ ನೃತ್ಯ ಕಾರ್ಯಕ್ರಮ ಆಯೋಜಿಸಲಾಗಿತ್ತು. ನೃತ್ಯದಲ್ಲಿ ವಿದ್ಯಾರ್ಥಿಗಳು ಸಾಂಪ್ರದಾಯಿಕ ವೇಷಭೂಷಣ ತೊಟ್ಟು , ನವರಾತ್ರಿಯ ಹಬ್ಬದ ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸಿದರು. ಪ್ರತಿದಿನ ವಿದ್ಯಾರ್ಥಿಗಳು ವಿಭಿನ್ನ ಬಣ್ಣದ ಉಡುಪು ಧರಿಸುವ ಮೂಲಕ ವಿಶಿಷ್ಟವಾಗಿ ನವರಾತ್ರಿ ಹಬ್ಬವನ್ನು ಆಚರಿಸಿದರು.



**ಶಿರಸಿ: ನಗರದ ಎಂಇಎಸ್ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಶರನ್ನವರಾತ್ರಿ ಪ್ರಯುಕ್ತ ಏರ್ಪಡಿಸಲಾಗಿದ್ದ ಗರ್ಭಾ ಡಾನ್ಸ್ ಅಂಗವಾಗಿ ವಿದ್ಯಾರ್ಥಿನಿಯರು ಸ್ವಪ್ರೇರಣೆಯಿಂದ ಕಾಲೇಜಿನ ದ್ವಾರದಲ್ಲಿ ಚಿತ್ರಿಸಿರುವ ರಂಗೋಲಿ ಜನಮನ ಸೆಳೆದಿದೆ.**



**ಶಿರಸಿ ಸಿದ್ದಾಪುರ ತಾಲೂಕಿನ ಗಡಿ ಪ್ರದೇಶವಾದ ಸರಕುಳಿ ಶ್ರೀ ಮಹಿಷಾಸುರ ಮರ್ಧಿನಿ ದೇವಾಲಯದಲ್ಲಿ ನವರಾತ್ರಿ ಉತ್ಸವದ ಅಂಗವಾಗಿ ಮಂಗಳವಾರ ವಿವಿಧ ಕಾರ್ಯಕ್ರಮಗಳು ನಡೆದವು.**

## ಚಂದ್ರಶೇಖರ ಕಳಸಗೆ ಬೀಳ್ಕೊಡುಗೆ ಸಮಾರಂಭ

# ಅಧಿಕಾರಿಯ ಕಾರ್ಯ ಸೇವೆ ಹೊಗಳಿದ ಸಿಬ್ಬಂದಿ

● **ತತ್ವನಿಷ್ಠ, ಹೊನ್ನಾವರ:** ತಾಲೂಕು ಆಸ್ಪತ್ರೆಗೆ ಕಳೆದ 15 ವರ್ಷಗಳಿಂದ ಕ್ಷಕಿರಣ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ಹಾಗೂ ನೌಕರರ ಸಂಘದ ತಾಲೂಕು ಘಟಕದ ಉಪಾಧ್ಯಕ್ಷರಾಗಿಯೂ ಕೆಲಸ ಮಾಡಿದ ಚಂದ್ರಶೇಖರ ಕಳಸ (ಕಳಸ್ ಸರ್) ಅವರಿಗೆ ಬೀಳ್ಕೊಡುಗೆ ಸಮಾರಂಭ ನಡೆಯಿತು.

ಅವರ ಆತ್ಮೀಯ ನಡೆ, ಕ್ರಿಯಾಶೀಲ ಧೋರಣೆಗಳಿಂದ ಆಸ್ಪತ್ರೆಯ ಸಿಬ್ಬಂದಿ ವರ್ಗ ಹಾಗೂ ಸಾರ್ವಜನಿಕರಲ್ಲಿ ಪ್ರೀತಿಪಾತ್ರರಾದ ಕಳಸರವರಿಗೆ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಗೌರವ ಸಮರ್ಪಿಸಿದರು.

ಸ್ತ್ರೀರೋಗ ತಜ್ಞ ಡಾ. ಕೃಷ್ಣಾ ಜಿ ಅವರು ಮಾತನಾಡಿ, "ಕಳಸ್ ಸರ್ ವೃತ್ತಿ ನಿಷ್ಠರು, ಪ್ರಾಮಾಣಿಕರು. ತಮ್ಮ ಸೇವಾವಧಿಯಲ್ಲಿ ಆಸ್ಪತ್ರೆಯ ಪ್ರತಿಯೊಬ್ಬರಿಗೂ ಸ್ಪಂದಿಸಿದ್ದಾರೆ"



ಎಂದರು. ಡಾ. ಪ್ರಕಾಶ ನಾಯ್ಕರು, "ಸಿಬ್ಬಂದಿ ನೋವು-ನಲಿವುಗಳಿಗೆ ಸದಾ ಸ್ಪಂದಿಸುವ ಗುಣ ಇವರದು" ಎಂದು ಹೇಳಿದರು.

ಆಡಳಿತ ವೈದ್ಯಾಧಿಕಾರಿ ಡಾ. ರಾಜೇಶ್ ಕಿಣಿ ಅವರು, "ರೋಗಿಗಳ ಮನವಿಗೆ ತಕ್ಷಣ ಸ್ಪಂದಿಸುವ ಗುಣ ಕಳಸರವರದು. ಸೇವೆಯಲ್ಲಿ ಯಾವುದೇ ಚ್ಯುತಿ ತರದೆ ನಡೆದುಕೊಂಡಿದ್ದಾರೆ" ಎಂದು ಶ್ಲಾಘಿಸಿದರು.

ಡಾ. ಅನುರಾಧ, ಆಡಳಿತ ಸಹಾಯಕಾಧಿಕಾರಿ ಶಶಿಕಲಾ ನಾಯ್ಕ ಹಾಗೂ ಹಲವು ಸಿಬ್ಬಂದಿ ತಮ್ಮ ನೆನಪುಗಳನ್ನು ಹಂಚಿಕೊಂಡರು. ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಡಾ. ಶ್ರೀನಿವಾಸ ನಾಯ್ಕ , ಡಾ. ಜನಾರ್ಧನ ಮೊಗೆರ್, ಡಾ. ಗುರುದತ್ತ ಕುಲಕರ್ಣಿ ಸೇರಿದಂತೆ ಅನೇಕರು ಹಾಜರಿದ್ದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಚಂದ್ರಶೇಖರ ಕಳಸ ಮಾತನಾಡಿ, "ಮೂವತ್ತು ವರ್ಷಗಳ ಕಾಲ ಆರೋಗ್ಯ ಇಲಾಖೆಯಲ್ಲಿ ಸಾರ್ವಜನಿಕ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿದ್ದು ನನ್ನ ಸೌಭಾಗ್ಯ. ಈ ಅವಕಾಶ ನೀಡಿದ ಹಾಗೂ ಸಹಕರಿಸಿದ ಎಲ್ಲರಿಗೂ ನಾನು ಕೃತಜ್ಞ" ಎಂದರು.

ಕಾರ್ಯಕ್ರಮದಲ್ಲಿ ಶುಶ್ರೂಷಾಧಿಕಾರಿ ಸ್ಟೀಟಾ ಫರ್ನಾಂಡಿಸ್ ಸ್ವಾಗತಿಸಿದರು, ಮಹಾಲಕ್ಷ್ಮಿ ನಾಯ್ಕ ವಂದಿಸಿದರು. ವೆಂಕಟೇಶ ಜಾಡಮಾಲಿ ಪಾರ್ಥನೆ ಹಾಡಿದರು. ಮಂಗಲಾ ನಾಯ್ಕ ಕಾರ್ಯಕ್ರಮ ನಿರೂಪಿಸಿದರು.



**ಶಿರಸಿ.ತಾಲೂಕಿನ ಎಕ್ಕಂಬಿಯಲ್ಲಿ ನೆಲೆನಿಂತ ಶ್ರೀ ಮಹಾಸತಿ ಮಾಸ್ತಿ ದೇವಿಯ ಸನ್ನಿಧಿಯಲ್ಲಿ ನವರಾತ್ರಿಯ ಅಂಗವಾಗಿ ವಿವಿಧ ಧಾರ್ಮಿಕ ವಿಧಿ ವಿಧಾನಗಳು ನೆರವೆರುತ್ತಿವೆ. ಸ್ಥಳೀಯ ಹಾಗೂ ಸೂತ್ತಮುತ್ತಲಿನ ಗ್ರಾಮದ ನೂರಾರು ಭಕ್ತರು ದೇವಿ ಸನ್ನಿಧಾನಕ್ಕೆ ಆಗಮಿಸಿ ದರ್ಶನಪಡೆದು ಪ್ರಸಾದ ಸ್ವೀಕರಿಸಿದರು.**

# ಪೊಲೀಸರ ಮಕ್ಕಳಿಗೆ ಲೋಕೇಶ್ವರ ಪ್ರತಿಭಾ ಪುರಸ್ಕಾರ

● **ತತ್ವನಿಷ್ಠ, ಶಿರಸಿ:** ಶಿರಸಿ ಉಪವಿಭಾಗದ ಪೊಲೀಸ್ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸರ ಮಕ್ಕಳಲ್ಲಿ 2022-23 ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಐವರು ವಿದ್ಯಾರ್ಥಿಗಳಿಗೆ ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕ ಎಸ್.ಎಸ್.ಭಟ್ಟ ಲೋಕೇಶ್ವರ ಇವರ ಸಹಯೋಗದಲ್ಲಿ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಎಸ್.ಎಸ್.ಭಟ್ಟ ಲೋಕೇಶ್ವರ ಅವರು ಪ್ರತಿ ವರ್ಷ ನೀಡುತ್ತಿರುವ ಪ್ರತಿಭಾ ಪುರಸ್ಕಾರದಡಿಯಲ್ಲಿ ಶಿರಸಿ ತಾಲೂಕಿನ ಪೊಲೀಸ್ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಮಕ್ಕಳಿಗೆ ಈ ಪ್ರತಿಭಾ ಪುರಸ್ಕಾರ ನೀಡುತ್ತಿರುವುದು ಉಲ್ಲೇಖನೀಯ.

ಶಿರಸಿ ಉಪವಿಭಾಗದ ಡಿಎಸ್‌ಪಿ ಗೀತಾ ಪಾಟೀಲ್ ಪ್ರತಿಭಾ ಪುರಸ್ಕಾರ ನಡೆಸಿಕೊಟ್ಟರು. ಸಿಪಿಐ ಶಶಿಕಾಂತ ವರ್ಮಾ ಉಪಸ್ಥಿತರಿದ್ದು, ಸಹಕರಿಸಿದರು. ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಿದ ಎಸ್.ಎಸ್.ಭಟ್ಟ ಲೋಕೇಶ್ವರ ಇವರನ್ನು ಇದೇ ಸಂದರ್ಭದಲ್ಲಿ ಡಿಎಸ್‌ಪಿ ಗೀತಾ ಪಾಟೀಲ ಸನ್ಮಾನಿಸಿ, ಗೌರವಿಸಿದರು.





# ಅಂಚೆ ಜನ ಸಂಪರ್ಕ ಅಭಿಯಾನಕ್ಕೆ ಚಾಲನೆ

● **ತತ್ವನಿಷ್ಠ, ಶಿರಸಿ:** ಒಂದು ಸೂರು ನೂರು ಸೇವೆ ಎಂಬ ಧ್ಯೇಯ ವಾಕ್ಯದೊಂದಿಗೆ ತಾಲೂಕಿನ ಕೋಡ್ಸರ ಮುಟ್ಟಳ್ಳಿ ಗ್ರಾಮದಲ್ಲಿ ಅಂಚೆ ಜನ ಸಂಪರ್ಕ ಅಭಿಯಾನಕ್ಕೆ ಯಶಸ್ವಿಯಾಗಿ ಚಾಲನೆ ನೀಡಲಾಯಿತು.



ಅಭಿಯಾನದಲ್ಲಿ ವಿವಿಧ ಅಂಚೆ ಸೇವೆಗಳ ಮಾಹಿತಿ ಕಾರ್ಯಾಗಾರ ನಡೆಯಿತು. ಈ ಕಾರ್ಯಕ್ರಮದಲ್ಲಿ ಹಲವು ಗ್ರಾಹಕರು 10 ಲಕ್ಷ ರೂಪಾಯಿಗಳ ಅಪಘಾತ ವಿಮೆ ಯೋಜನೆ, ಅಂಚೆ ಖಾತೆ ಮತ್ತು ಅಂಚೆ ಜೀವ ವಿಮೆಗಳ ಲಾಭ ಪಡೆದುಕೊಂಡರು. ಡೈರೆಕ್ಟ್ ಬೆನಿಫಿಟ್ ಟ್ರಾನ್ಸಫರ್ ಫಲಾನುಭವಿಗಳಿಗೆ ಐಪಿಪಿಬಿ ಮೊದಲಾದ ಆನ್ಲೈನ್ ಖಾತೆಗಳನ್ನು ಸ್ಥಳದಲ್ಲಿಯೇ ತೆರೆಯುವ ವಿಶೇಷ ವ್ಯವಸ್ಥೆ ಮಾಡಲಾಗಿತ್ತು.

ಶಿರಸಿ ದಕ್ಷಿಣ ಉಪ ವಿಭಾಗದ ಸಹಾಯಕ ಅಂಚೆ ಅಧೀಕ್ಷಕ ಎಮ್.ಜಿ.ಕರಣ್ ಅಧ್ಯಕ್ಷತೆ ವಹಿಸಿ, ವಿವಿಧ ಅಂಚೆ ಸೇವೆಗಳ ಬಗ್ಗೆ ಮಾಹಿತಿ ನೀಡಿದರು. ನರೇಂದ್ರ, ಸೀತಾರಾಮ ಹೆಗಡೆ, ರವೀಂದ್ರ ಸುಬ್ರಾಯ ಹೆಗಡೆ, ಎಮ್.ಎಮ್.ಹೆಗಡೆ ಮಾರ್ಕೆಟಿಂಗ್ ಎಕ್ಸಿಕ್ಯುಟಿವ್ ಅರವಿಂದ ಗುಡಿಗಾರ, ನಾಗರಾಜ ತಳವಾರ, ಅಂಚೆ ಮೇಲ್ವಿಚಾರಕರು ಮತ್ತು ಮನೋಜಾ ನಾರಾಯಣ ಹೆಗಡೆ, ಕೋಡ್ಸರ ಮುಟ್ಟಳ್ಳಿ ಶಾಖಾ ಅಂಚೆ ಪಾಲಕರು ಉಪಸ್ಥಿತರಿದ್ದರು.



**ಯಲ್ಲಾಪುರ ತಾಲೂಕಿನ ಮಾವಳ್ಳಿಯ ಗ್ರಾಮದೇವಿ ದೇವಸ್ಥಾನದಲ್ಲಿ ನವರಾತ್ರಿ ಉತ್ಸವದ ಪ್ರಯುಕ್ತ ದೇವರಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು.**

## ಯುವಕ ಆತ್ಮಹತ್ಯೆ

● **ತತ್ವನಿಷ್ಠ, ಯಲ್ಲಾಪುರ:** ಯುವಕನೊಬ್ಬ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ತಾಲೂಕಿನ ಮಂಚಿಕೇರಿ ಸಮೀಪದ ಮಾದನಸರದಲ್ಲಿ ನಡೆದಿದೆ. ಮಾದನಸರದ ಮಹೇಶ ಜಟ್ಟಿ ಪಟಗಾರ (29) ಮೃತ ಯುವಕ. ಕೂಲಿ ಕೆಲಸ ಮಾಡಿಕೊಂಡಿದ್ದ ಈತ, ಮನೆಯ ಕೊಠಡಿಯೊಳಗಿನ ಜಂತಿಗೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಕುರಿತು ಅವರ ತಂದೆ ಜಟ್ಟಿ ಪಟಗಾರ ದೂರು ನೀಡಿದ್ದು, ಯಲ್ಲಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಜಮಾಬಂಧಿ

● **ತತ್ವನಿಷ್ಠ, ಕಾರವಾರ:** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಅವರ ಅಧ್ಯಕ್ಷತೆಯಲ್ಲಿ ಕಾರವಾರ ತಾಲೂಕು ಪಂಚಾಯತಿಯ ಜಮಾಬಂಧಿ ಕಾರ್ಯಕ್ರಮವು ಅ.10 ರಂದು ಬೆಳಗ್ಗೆ 11 ಗಂಟೆಗೆ ತಾಲೂಕು ಪಂಚಾಯತ ಸಭಾಭವನದಲ್ಲಿ ನಡೆಯಲಿದೆ ಎಂದು ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

## ಬೈಂದೂರ ನಿಧನ

● **ತತ್ವನಿಷ್ಠ, ಶಿರಸಿ:** ಜಿಲ್ಲೆಯ ಪ್ರಸಿದ್ಧ ಸಿವಿಲ್ ಗುತ್ತಿಗೆದಾರರಾಗಿ ಗುರುತಿಸಿಕೊಂಡಿದ್ದ ಶಿರಸಿಯ ಎಂ.ಬಿ. ಬೈಂದೂರ ಮಂಗಳವಾರ ಅನಾರೋಗ್ಯದಿಂದ ಹುಬ್ಬಳ್ಳಿಯ ಆಸ್ಪತ್ರೆಯಲ್ಲಿ ನಿಧನರಾದರು. ಕೆಲ



ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಬೈಂದೂರ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಹದೇ ನಿಧನರಾದರು. ಅತ್ಯುತ್ತಮ ಸಿವಿಲ್ ಕಾಮಗಾರಿಗೆ ಹೆಸರುವಾಸಿಯಾಗಿದ್ದ ಅವರು, ಮುಖ್ಯಮಂತ್ರಿಯಿಂದ ಎರಡು ಬಾರಿ ಸನ್ಮಾನಕ್ಕೊಳಗಾಗಿದ್ದ ಹಿರಿಮೆ ಅವರದ್ದಾಗಿತ್ತು. ಮೃತರು ಪತ್ನಿ, ಮೂವರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ.

# ನವರಾತ್ರಿ: ದೇವಾಲಯಗಳಲ್ಲಿ ಪೂಜೆ ಸಲ್ಲಿಸಿದ ರೂಪಾಲಿ ನಾಯ್ಕ



● **ತತ್ವನಿಷ್ಠ, ಕಾರವಾರ:** ನವರಾತ್ರಿ ಅಂಗವಾಗಿ ಬಿಜೆಪಿ ರಾಜ್ಯ ಉಪಾಧ್ಯಕ್ಷೆ, ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ಮಂಗಳವಾರ ಕಾರವಾರ ಹಾಗೂ ಅಂಕೋಲಾದ ವಿವಿಧ ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿದರು.

ಕಾರವಾರದ ಬಾಡ ದುರ್ಗಾದೇವಿ ದೇವಸ್ಥಾನ, ಸದಾಶಿವಗಡ ಶ್ರೀ ದುರ್ಗಾದೇವಿ ದೇವಸ್ಥಾನ, ನಂದನಗದ್ದಾ ಶ್ರೀ ಸಂತೋಷಿಮಾತಾ ದೇವಾಲಯ, ಅಂಕೋಲಾ ಶ್ರೀ ಶಾಂತಾದುರ್ಗಾ ದೇವಸ್ಥಾನ, ಬೆಳಂಬಾರ ಶ್ರೀ ದುರ್ಗಾದೇವಿ ದೇವಸ್ಥಾನ, ಕೊಡಸಣಿ ಶ್ರೀ ಶಾಂತಿಕಾ ಪರಮೇಶ್ವರಿ ದೇವಸ್ಥಾನ ಹಾಗೂ ಅಮದಳ್ಳಿ ಶ್ರೀ ಭೂದೇವಿ ದೇವಸ್ಥಾನಗಳಿಗೆ ತೆರಳಿ, ದೇವಿಯ ದರ್ಶನ ಪಡೆದು, ದೇವಿಗೆ ಉಡಿ ಸೇವೆ ಸಲ್ಲಿಸಿ, ಪೂಜೆ ಸಲ್ಲಿಸಿ ದರ್ಶನ ಪಡೆದರು. ಅಮದಳ್ಳಿ ಬ್ರಹ್ಮದೇವವಾಡ ಶ್ರೀ ದುರ್ಗಾದೇವಿ ದರ್ಶನ ಪಡೆದರು.

ನವರಾತ್ರಿ ಸಂದರ್ಭದಲ್ಲಿ ನಮ್ಮ ನಾಡಿನ ಸಮಸ್ತ ಜನತೆಗೆ, ವಿಶೇಷವಾಗಿ ಕಾರವಾರ ಅಂಕೋಲಾ ಕ್ಷೇತ್ರದ ಜನತೆಯ ಪರವಾಗಿ ಪ್ರಾರ್ಥಿಸಿದರು. ಪಕ್ಷದ ಪ್ರಮುಖರು, ಕಾರ್ಯಕರ್ತರು, ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ನವರಾತ್ರಿ ವಿಶೇಷವಾಗಿ ಮಹಿಳೆಯರ ಹಬ್ಬ. ದೇಶಾದ್ಯಂತ ಬೇರೆ ಬೇರೆ ಹೆಸರಿನಲ್ಲಿ ಆಚರಿಸಲಾಗುತ್ತದೆ. ಈ ಅವಧಿಯಲ್ಲಿ ನವದುರ್ಗೆಯನ್ನು ಪೂಜಿಸಲಾಗುತ್ತದೆ. ದುಷ್ಟ ಶಕ್ತಿಗಳ ವಿರುದ್ಧ ಶಿಷ್ಟ ಶಕ್ತಿಯ ವಿಜಯದ ಪ್ರತೀಕವಾಗಿ ಆಚರಿಸಲಾಗುತ್ತದೆ. ಸಮಸ್ತ ಜನತೆಗೆ ಒಳ್ಳೆಯದಾಗಲಿ ಎಂದು ಪ್ರಾರ್ಥನೆ ಸಲ್ಲಿಸಿದ್ದೇನೆ ಎಂದು ಮಾಜಿ ಶಾಸಕಿ, ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕಹೇಳಿದರು.

# ಸೋಮೇಶ್ವರ ಬಳಗದಿಂದ ರಸ್ತೆ ದುರಸ್ತಿ

● **ತತ್ವನಿಷ್ಠ, ಶಿರಸಿ:** ಶಿರಸಿ-ಸಿದ್ದಾಪುರ ಮುಖ್ಯ ರಸ್ತೆಯ ಕಾನಗೋಡದಿಂದ ಸೋಮಸಾಗರ ಮೂಲಕ ಕುಮಟಾ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಉಂಟಾದ ಹೊಂಡಗಳನ್ನು ಸೋಮೇಶ್ವರ ಗೆಳೆಯರ ಬಳಗದವರು ದುರಸ್ತಿಗೊಳಿಸಿ ಮಾದರಿ ಕಾರ್ಯ ಮಾಡಿದ್ದಾರೆ.

ಈ ರಸ್ತೆಯು ಹತ್ತಾರು ಹಳ್ಳಿಗಳ ಮೂಲಕ ಕುಮಟಾ ರಸ್ತೆಗೆ ಸಂಪರ್ಕ ಕಲ್ಪಿಸುವ ಡಾಂಬರ್ ರಸ್ತೆಯು ಕಿತ್ತೆದ್ದು, ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿತ್ತು. ಹೊಂಡ-ಗುಂಡಿಗಳಲ್ಲಿ ಬೈಕ್ ಚಲಿಸಿ, ನಿಯಂತ್ರಣ ತಪ್ಪಿ ಉರುಳಿ ಬಿದ್ದು ಸವಾರರು ಗಾಯಗೊಂಡಿದ್ದರು. ರಸ್ತೆಯಲ್ಲಿ ಸಂಚಾರ ಮಾಡಲು ಹರಸಾಹಸ ಪಡಬೇಕಾಗಿರುವುದನ್ನು ಮನಗಂಡ ಸೋಮೇಶ್ವರ



ಗೆಳೆಯರ ಬಳಗದವರು ನಮ್ಮ ರಸ್ತೆ ನಮ್ಮ ಜವಾಬ್ದಾರಿ ಎನ್ನುವ ಧ್ಯೇಯದೊಂದಿಗೆ ಹೊಂಡ-ಗುಂಡಿಗಳನ್ನು ಮುಚ್ಚಿ ಮಾದರಿಯಾಗಿದ್ದಾರೆ.



**ಸಿದ್ದಾಪುರ: ಬಿದ್ರಕಾನ ಗ್ರಾಮ ಪಂಚಾಯತದ ವಿವಿಧ ಕಾಮಗಾರಿಗಳಿಗೆ ಅನುದಾನ ನೀಡಲು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಬಿಜೆಪಿ ವೃತ್ತಿಪರ ಪ್ರಕೋಷ್ಠ ಜಿಲ್ಲಾ ಸಹಸಂಚಾಲಕ ವಿನಾಯಕ ಹೆಗಡೆ ಗೋಳಗೋಡ, ಪ್ರಮುಖರಾದ ಲಕ್ಷ್ಮೀಶ ಹೆಗಡೆ, ವಿನಾಯಕ ಹೆಗಡೆ, ಪ್ರಶಾಂತ ಹೆಗಡೆ, ಗಣಪತಿ ಗೌಡ, ಶ್ರೀಪಾದ ಹೆಗಡೆ, ಉದಯ ಪಟಗಾರ ಮುಂತಾದವರು ಮನವಿ ಸಲ್ಲಿಸಿದರು.**

# ಕೆಟ್ಟು ನಿಂತ ಬಸ್: ಜನರ ಪರದಾಟ

● **ತತ್ವನಿಷ್ಠ, ಶಿರಸಿ:** ಶಿರಸಿಯಿಂದ ದೇವಿಮನೆ ವರೆಗೆ ಸಂಚರಿಸುವ ಬಸ್ ನಗರದ ಶಿವಾಜಿ ಚೌಕದ ಬಳಿಯ ರಸ್ತೆಯ ಮಧ್ಯೆ ಕೆಟ್ಟುನಿಂತು ಪ್ರಯಾಣಿಕರು ಪರದಾಡುವಂತಾಯಿತು.

ಗ್ಯಾರೆಂಟಿ ಯೋಜನೆ ಜಾರಿಯಾಗಿನಿಂದಲೂ ಸಾರಿಗೆ ಸಂಸ್ಥೆಗೆ ಗ್ರಹಣ ಹಿಡಿದಿದ್ದು, ಪ್ರತಿನಿತ್ಯ ಶಿರಸಿ ತಾಲೂಕಿನ ಗ್ರಾಮೀಣ ಮಾರ್ಗದ ಮಧ್ಯೆ ಬಸ್ ಕೆಟ್ಟು ನಿಲ್ಲುವ ದೃಶ್ಯ ಸಾಮಾನ್ಯವಾಗಿದೆ. ಉಕ ಉಪ ವಿಭಾಗದಲ್ಲಿ ಬಹುತೇಕ ಬಸ್ಸುಗಳು ಹಳೆತಾಗಿರುವುದಲ್ಲದೇ, ಅತಿ ಹೆಚ್ಚು ಕಿಲೋಮೀಟರ್ ಓಡಿದ ಬಸ್ಸುಗಳ ಸಂಖ್ಯೆ ಅಧಿಕವಾಗಿದೆ. ಹೊಸ ಬಸ್ ಗಳನ್ನು ವಿಭಾಗಕ್ಕೆ ನೀಡದ ಕಾರಣ ಹಳೆ ಬಸ್ಸುಗಳನ್ನು ಓಡಿಸುವ ಅನಿವಾರ್ಯ ಎದುರಾಗಿದೆ.

ಶಿರಸಿ-ಕುಮಟಾ ಹೆದ್ದಾರಿ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಜಿಲ್ಲಾಡಳಿತದ ಸೂಚನೆಯಂತೆ ಸಂಚಾರವನ್ನು ನಿರ್ಬಂಧಿಸಿ ಜಿಲ್ಲಾಡಳಿತ ಆದೇಶ ಹೊರಡಿಸಿದ್ದರಿಂದ ಶಿರಸಿ ತಾಲೂಕಾ ವ್ಯಾಪ್ತಿಯ ಜಾನ್ಮನೆ, ಖೂರ್ಸೆ, ಮಂಜುಗುಣಿ ಕ್ರಾಸ್, ಕಸಗೆ,



ರಾಗಿಹೊಸಳ್ಳಿ, ದೇವಿಮನೆ ಭಾಗದ ಜನರಿಗೆ ಬಸ್ಸಿನ ಸೌಲಭ್ಯವಿಲ್ಲದೇ ತೀವ್ರ ಸಮಸ್ಯೆ ಎದುರಿಸುತ್ತಿದ್ದರು.

ಆ ಭಾಗದ ಸಾರ್ವಜನಿಕರು ಶಾಸಕ ಭೀಮಣ್ಣ ನಾಯ್ಕ ಅವರ ಬಳಿ ಆ ಭಾಗದ ಸಾರ್ವಜನಿಕರ ವಿನಂತಿ ಮೇರೆಗೆ ದೇವಿಮನೆ ವರೆಗೆ ಬಸ್ ಆರಂಭಿಸಿದರೂ, ಹಳೆಯ ಬಸ್ ಗಳು ನೀಡಿದ ಹಿನ್ನೆಲೆ ಪ್ರತಿನಿತ್ಯ ಆ ಭಾಗದ ಸಾರ್ವಜನಿಕರು ತೀವ್ರ ಸಮಸ್ಯೆ ಎದುರಿಸುವಂತಾಗಿದೆ.

# ಡಾ. ಪ್ರೀತಿ ಭಂಡಾರಕರಗೆ ಪ್ರಶಸ್ತಿ

● **ತತ್ವನಿಷ್ಠ, ಕುಮಟಾ:** ಸ್ಥಳೀಯ ಕಮಲಾ ಬಾಳಿಗಾ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ. ಪ್ರೀತಿ ಪಿ. ಭಂಡಾರಕರ ಅವರಿಗೆ ಬೆಂಗಳೂರಿನ ಪ್ರತಿಷ್ಠಿತ 'ಚಿತ್ರಸಂತೆ' ಸಂಸ್ಥೆಯ ೨೦೨೫ ನೇ ಸಾಲಿನ ವಾರ್ಷಿಕೋತ್ಸವದಲ್ಲಿ ರಾಜ್ಯಮಟ್ಟದ ಕರ್ನಾಟಕ ಎಚೀವರ್ಸ್ ಅವಾರ್ಡ್ಸ್‌ನಲ್ಲಿ 'ಎಕ್ಸಲೆನ್ಸ್ ಇನ್ ಅಕಾಡೆಮಿಕ ಎಂಡ್ ಎಜ್ಯುಕೇಷನ್' ಎಂಬ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕೊಡಗಿನ ಕವಿ ಹಾಗೂ ಕೊಡಗಿನ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕಿ ಅರ್ಜುನ್ ಮೌರ್ಯ ಇವರು ಪ್ರೀತಿ ಭಂಡಾರಕರ ಅವರ ಶೈಕ್ಷಣಿಕ ಕ್ಷೇತ್ರದ ಸಾಧನೆಯ ಮಾಹಿತಿಯೊಂದಿಗೆ ಇವರ ಹೆಸರನ್ನು ಪ್ರಸ್ತುತ ಪ್ರಶಸ್ತಿಗಾಗಿ ನೋಂದಾಯಿಸಿದ್ದರಾಗಿ ತಿಳಿದು ಬಂದಿದೆ.



## ಅ. 2ಕ್ಕೆ ಮಾಂಸ ಮಾರಾಟ ನಿಷೇಧ

● **ತತ್ವನಿಷ್ಠ, ಕುಮಟಾ:** ಅ. 2ರಂದು ಗಾಂಧಿ ಜಯಂತಿ ಹಿನ್ನೆಲೆಯಲ್ಲಿ ಸರಕಾರದ ಆದೇಶದಂತೆ, ಕುಮಟಾ ಪುರಸಭಾ ವ್ಯಾಪ್ತಿಯಲ್ಲಿ ಮಾಂಸ ಮಾರಾಟ ಮಾಡುವುದನ್ನು ನಿಷೇಧ ಮಾಡಲಾಗಿದೆ. ಈ ಬಗ್ಗೆ ಅಂಗಡಿಕಾರರು ಹಾಗೂ ಗ್ರಾಹಕರು ಗಮನಿಸಲು ಪುರಸಭೆ ತಿಳಿಸಿದೆ.

ಟೆಕ್‌ವೈದ್ಯ
ತಂತ್ರಜ್ಞಾನ ಲೋಕದ ಅಪರೂಪದ, ವಿನೂತನ ಸಂಗತಿಗಳಿಗೆ ತಪ್ಪದೇ ಓದಿ
www.techvaidya.in
7019438530
ವಾಟ್ಸ್‌ಆಪ್ ಮಾಡಿ,
ಉಚಿತವಾಗಿ ಇ ಪೇಪರ್ ಪಡೆಯಿರಿ

## ಬಾಪೂಜಿ ನಗರದಲ್ಲಿ ನವರಾತ್ರಿ ಸಂಭ್ರಮ



ಶಿರಸಿಯ ಬಾಪೂಜಿ ನಗರದಲ್ಲಿ ನವರಾತ್ರಿ ಹಬ್ಬದ ಸಂಭ್ರಮ, ದಸರಾ ರಂಗೇರಿದೆ. **ಪೂಜಾ ಪ್ರಶಾಂತ್ ಬೋರ್ಕರ್ ಅಧ್ಯಕ್ಷತೆಯ ಸಂಘದ ಸರ್ವ ಸದಸ್ಯರ ಸಂಘಟನೆ ಹಾಗೂ ನೇತೃತ್ವದಲ್ಲಿ ಇಲ್ಲಿ ದಸರಾ ಅದ್ದೂರಿಯಾಗಿ ಆಚರಿಸಲ್ಪಡುತ್ತಿದೆ.** ನವರಾತ್ರಿ ಪ್ರಯುಕ್ತ **ಶಿರಸಿ ಉಪ ವಿಭಾಗದ ಸಹಾಯಕ ಆಯುಕ್ತೆ ಕುಮಾರಿ ಕೆ.ವಿ.ಕಾವ್ಯಾರಾಣಿ** ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.




Owned and Published by PRAVEEN BALACHANDRA HEGDE, 28 KARJAGI BALESAR, UTTARA KANNADA, KARNATAKA - 581340. Printer: PLOT NO. 15 & 16, KIADB RAYAPUR INDUSTRIAL AREA, DHARWAD, KARNATAKA - 580009. Printed at and by METROPOLITAN MEDIA COMPANY LIMITED PLOT NO. 15 & 16, KIADB RAYAPUR INDUSTRIAL AREA, DHARWAD, KARNATAKA - 580009. Published at: Tatvanishta, Behind Hotel Mdhuvana, Yellapur Road, Sirsi-581 401 Editor: PRAVEEN HEGDE , Executive Editor: Mahesh Hegde All rights reserved. Reproduction in whole or in part without written permission is prohibited.

